† ಶ್ರೀ ಸಿ. ಎಂ. ಇಬ್ರಾಹಿಂ (ಶಿವಾಜಿನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕೈಗಾರಿಕಾ ಮಂತ್ರಿಗಳು ತಂದಿರತಕ್ಕ ಬಿಲ್ಲಿನ ಬಗ್ಗೆ ಬಹಳ ಭಾರೀ ವಿಷಾದದಿಂದ ಮಾತನಾಡಬೇಕಾಗಿದೆ. ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ರೆಂಕೋ ಕಾರ್ಖಾನೆ ಯಲ್ಲಿ ಒಂದು ವರ್ಷಕ್ಕೆ ೧ ಕೋಟಿ ೩೦ ಲಕ್ಷ ರೂಪಾಯಿಗಳು ನಷ್ಟವಾಗುತ್ತಿದೆ ಅಂದರೆ ಅದು ಸರ್ಕಾರದ ಅಸಮರ್ಥತೆಯನ್ನು ತೋರಿಸುತ್ತದೆ. ಇದು ಹೇಗಿದೆ ಅಂದರೆ ಕೂತುಕೊಂಡು ತಿನ್ನುವ ಅಸಮರ್ಥ ಮಗನ ಕೈಗೆ ಮನೆ ಆಡಳಿತವನ್ನು ಕೊಟ್ಟಂತೆ ಈ ಸರ್ಕಾರದವರು ಪ್ರತಿ ವರ್ಷವೂ ಒಂದೊಂದು ಕಾರ್ಖಾನೆಗಳನ್ನು ಮಾರಿಕೊಳ್ಳುತ್ತಾ ಬರುತ್ತಿದ್ದಾರೆ. ಕೇಂದ್ರ ಸರ್ಕಾರದವರು ಈ ಕಂಪನಿಗಳನ್ನು ಚೆನ್ನಾಗಿ ನಡೆಸುವ ಜವಾಬ್ದಾರಿ ಇದೆಯೆಂದರೆ, ರಾಜ್ಯ ಸರ್ಕಾರಕ್ಕೆ ಈ ಒಂದು ಜವಾಬ್ದಾರಿ ಇಲ್ಲ ಎಂದಂತಾಯಿತು. ಇದಕ್ಕೆ ಕಾರಣ ಕೇಳಿದರೆ ಉತ್ತರ ಏನು ಹೇಳುತ್ತಾರೆಂದರೆ ನಾವು ಉತ್ಪಾದಿಸುವ ವಸ್ತುಗಳಿಗೆ ಸರಿಯಾದ ಮಾರ್ಕೆಟ್ ಇಲ್ಲ ಎಂದು. ಇದರಲ್ಲಿ ವ್ಯವಹಾರ ನಡೆಸುವವರು ಸರ್ಕಾರದವರು ಇವತ್ತು ಈ ಸರ್ಕಾರದವರಿಗೇ ಸರಿಯಾದ ಜವಾಬ್ದಾರಿ ಇಲ್ಲ. ಇವರಿಗೆ ಇದರ ಬಗ್ಗೆ ಕಾಳಜಿ ಇದ್ದಿದ್ದರೆ, ಇದು ಸರ್ಕಾರದ ಸ್ವತ್ತು, ಕರ್ನಾಟಕದ ಜನತೆಯ ದುಡ್ಡು ಎನ್ನುವ ಭಾವನೆ ಇದ್ದಿದ್ದರೆ ಈ ರೀತಿ ಇಷ್ಟೊಂದು ನಷ್ಟ ಆಗುತ್ತಾ ಇರಲಿಲ್ಲ. It is already buried. ಇದು ಮಹಮ್ಮದ್ ಬಿನ ತೊಗಲಕ್‌ನ ಸರ್ಕಾರ ಅಲ್ಲ. ಕರ್ನಾಟಕದ ೩ ಕೋಟಿ ಜನರು ತಮ್ಮ ಬೆವರನ್ನು ಸುರಿಸಿ ತಂದು ಕೊಟ್ಟಿರತಕ್ಕ ದುಡ್ಡು, ಜನಗಳ ಮೇಲೆ ತೆರಿಗೆಗಳನ್ನು ಹೇರಿ ವಸೂಲು ಮಾಡಿರತಕ್ಕ ದುಡ್ಡು, ಇಂಥ ದುಡ್ಡನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂಬುದನ್ನು ಸರ್ಕಾರ ಚೆನ್ನಾಗಿ ತಿಳಿದುಕೊಳ್ಳಬೇಕು. ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು ರಿಪೋರ್ಟ್ ಕೊಟ್ಟ ಮೇಲೆ ಕೂಡ ಪದೇ ಪದೇ ಎಚ್ಚರಿಸಿ ದರೂ ಕೂಡ ಸರ್ಕಾರದವರು ಅರಿತುಕೊಳ್ಳಲಿಲ್ಲ. ಯಾವ ಯಾವ ಫ್ಯಾಕ್ಟರಿಗಳು ಎಷ್ಟು ನಷ್ಟದಲ್ಲಿ ಇವೆ ಎಂಬುದನ್ನು ಒಳಹೊಕ್ಕು ನೋಡಿದರೆ ಗೊತ್ತಾಗುತ್ತದೆ. ಮಾನ್ಯ ಸಚಿವರು ಈ ಫ್ಯಾಕ್ಟರಿಗೆ ಹಾಕಿರತಕ್ಕ ಷೇರು ಬಂಡವಾಳ ೧೦೦ ರೂಪಾಯಿಗೆ ೩೦ ರೂಪಾಯಿಗಳು ಬರುತ್ತದೆ ಎಂದು ಹೇಳಿದ್ದಾರೆ. ಈ ರೀತಿ ಸರ್ಕಾರದ ಕಂಪೆನಿಗಳು ಪಾಪರ್ ಆದರೆ ಖಾಸಗಿಯವರು ಹೇಗೆ ಮುಂದೆ ಬಂದು ಬಂಡವಾಳ ಹಾಕಿ ಫ್ಯಾಕ್ಟರಿಯನ್ನು ತೆರೆಯುತ್ತಾರೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಸರ್ಕಾರ ಯಾವುದಕ್ಕೆ ಕೈಇಟ್ಟರೂ ಅದು ದರಿದ್ರದ ಕೈ ಆಗುತ್ತದೆ. ಹೀಗಿರುವಾಗ ಇದಕ್ಕೆ ಖಾಸಗಿಯವರು ಬಂಡವಾಳವನ್ನು ಹಾಕುವುದಕ್ಕೆ ಹೇಗೆ ಮುಂದೆ ಬರುತ್ತಾರೆ ? ಈ ರೀತಿ ಕಾರ್ಖಾನೆಗಳಲ್ಲಿ ನಷ್ಟವಾಗುವುದಕ್ಕೆ ಕಾರಣರು ಯಾರು ಎಂದು ಹೇಳಿದರೆ ಅವರಿಗೆ ಸಂತಾಪವನ್ನು ಸೂಚಿಸಿ ಎಂದು ಹೇಳಬಹುದು. ಮತ್ತು ಇದಕ್ಕೆ ಕಾರಣರಾದವರನ್ನು ಸರ್ಕಾರದವರು ದಂಡಿಸಿದ್ದಾರೆಯೋ ? ಒಬ್ಬ ಆರ್ಡಿನರಿ ಗುಮಾಸ್ತರು ೫ ರೂಪಾಯಿ

ಲಂಚ ತೆಗೆದುಕೊಂಡರೆ, ಭ್ರಷ್ಟಾಚಾರವನ್ನು ಮಾಡಿದರೆ ಅವನನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸುತ್ತಾರೆ. ಒಬ್ಬ ಕಾನ್‌ಸ್ಟೇಬಲ್ ಎಂಟಾಣೆ ಲಂಚ ತೆಗೆದುಕೊಂಡರೆ ಅವನನ್ನು ಸಸ್ಪೆಂಡ್ ಮಾಡಿ ಮನೆಗೆ ಕಳುಹಿಸುತ್ತಾರೆ. ಈಗ ಈ ಕೈಗಾರಿಕೆಯಲ್ಲಿ ಒಂದು ಕೋಟಿ ೩೦ ಲಕ್ಷ ರೂಪಾಯಿಗಳು ನಷ್ಟವಾಗಿದೆ, ಇದಕ್ಕೆ ಸಂಬಂಧಪಟ್ಟವರ ಬಗ್ಗೆ ಸರ್ಕಾರ ಕೈಗೊಂಡಿರತಕ್ಕ ಕ್ರಮ ಏನು ? ಈ ಕೈಗಾರಿಕೆಯನ್ನು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಕೊಡುವುದಾದರೆ ಇದರ ಬಗೆ ಏನು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ ? ಅಥವಾ ಅವರಿಗೆ ಸುಮ್ಮನೆ ವಹಿಸಿ ಕೊಟ್ಟಿದ್ದಾರೆಯೋ ? ನಾನು ಇದನ್ನು ಏತಕ್ಕೆ ಕೇಳುತ್ತಿದ್ದೇನೆ ಎಂದರೆ ಅನೇಕ ಕೈಗಾರಿಕೆಗಳು ಕೇಂದ್ರ ಸರ್ಕಾರದ ಆಡಳಿತದಲ್ಲಿ ಇವೆ. ನಮ್ಮ ರಾಜ್ಯ ಸರ್ಕಾರದ ಆಡಳಿತದಲ್ಲಿರತಕ್ಕ ಈ ಕೈಗಾರಿಕೆ ಕೇಂದ್ರ ಸರ್ಕಾರಕ್ಕೆ ಹೋದರೆ ಕರ್ನಾಟಕದಲ್ಲಿರತಕ್ಕ ಮಣ್ಣಿನ ಮಕ್ಕಳಿಗೆ ಕೆಲಸ ಸಿಕ್ಕುವುದು ಕಷ್ಟವಾಗುತ್ತದೆ. ಏತಕ್ಕೆಂದರೆ ಇದರ ಕಂಟ್ರೋಲು ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಆದ್ದರಿಂದ ಈ ಕಂಪೆನಿಯನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡಬೇಕಾದರೆ ಕರ್ನಾಟಕದ ಜನತೆಗೆ ಇಂತಿಷ್ಟು ಕೆಲಸಗಳನ್ನು ಕೊಡಬೇಕು ಎಂದು ಅಗ್ರಿಮೆಂಟಿನಲ್ಲಿ ಸೇರಿಸಲಾಗಿದೆಯೋ ? ಯಾವಾಗ ಕೇಂದ್ರ ಸರ್ಕಾರಕ್ಕೆ ಇದನ್ನು ವರ್ಗಾವಣೆ ಮಾಡುತ್ತಾರೆಯೋ ಆಗ ರಾಜ್ಯ ಸರ್ಕಾರಕ್ಕೆ ಇದರ ಮೇಲೆ ಹಿಡಿತ ಇರುವುದಿಲ್ಲ. ಅದು ಕೇಂದ್ರ ಸರ್ಕಾರದ ಕಂಪೆನಿಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದವರೊಡನೆ ರಾಜ್ಯ ಸರ್ಕಾರದವರು ಏನಾದರೂ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆಯೋ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಬೇಕು. ಮಾನ್ಯ ಮಂತ್ರಿಗಳು ಪ್ರತಿಯೊಂದು ವಿಚಾರವನ್ನೂ ಈಗ ಅಧಿಕಾರಿಗಳಿಂದ ತಿಳಿದುಕೊಂಡು ಬರುತ್ತಿದ್ದಾರೆ. ಅದು ಸರಿಯಲ್ಲ. ಅವರು ಈ ಸಭೆಗೆ ಬರಬೇಕಾದರೆ ಪ್ರತಿಯೊಂದು ವಿಚಾರವನ್ನೂ ತಿಳಿದುಕೊಂಡು ಬರಬೇಕು. ಈ ಸಭೆಯಲ್ಲಿ ಮಾನ್ಯ ಸದಸ್ಯರು ಹೇಳತಕ್ಕಂಥಾ ವಿಚಾರವನ್ನು ಮಾನ್ಯ ಮಂತ್ರಿಗಳು ಇಲ್ಲಿ ಕುಳಿತುಕೊಂಡು ಕೇಳಬೇಕು. ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಕುಳಿತುಕೊಳ್ಳದೇ ಹೋದರೆ ನಾವು ಈ ಸಭೆಯಲ್ಲಿರತಕ್ಕ ಕುರ್ಚಿ ಬೆಂಚುಗಳಿಗೆ ಹೇಳಬೇಕೇ ? ಆದ ಕಾರಣ ಈ ಸಭೆಯಲ್ಲಿ ಚರ್ಚೆ ನಡೆಯುವಾಗ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಹಾಜರಿರಬೇಕು. ಇವೊತ್ತು ಕರ್ನಾಟಕದ ಜನತೆ ನಿಮ್ಮ ಕೈಗೆ ಜನತೆಯನ್ನು ಕಾಪಾಡತಕ್ಕ ಒಂದು ಹಕ್ಕನ್ನು ಕೊಟ್ಟಿದ್ದಾರೆ. ಅದನ್ನು ಸರಿಯಾಗಿ ಉಪಯೋಗ ಮಾಡಬೇಕು. ಆದರೆ ದಿವಾಳಿತನವನ್ನು ಮಾಡತಕ್ಕ ಪರಿಸ್ಥಿತಿಯನ್ನು ಮುಂದುವರಿಸಬೇಡಿ ಎಂದು ಹೇಳಿ ಈ ಸಭೆಯಲ್ಲಿ ಈ ಕಂಪೆನಿಯನ್ನು ಕೇಂದ್ರಕೆ ವರ್ಗಾವಣೆ ಮಾಡತಕ್ಕ ವಿಷಯದಲ್ಲಿ ಆಗಿರತಕ್ಕ ಅಗ್ರಿಮೆಂಟನ್ನು ಇಡಬೇಕು. ಮತ್ತು ಟರ್ಮ್ಸ್ ಅಂಡ್ ಕಂಡೀಷನ್ಸ್ ಏನಿವೆ ಅವುಗಳನ್ನೂ ಮತ್ತು ಅಗ್ರಿಮೆಂಟ್ ಅನ್ನೂ ಇಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮದೇವ್(ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೇ ಈ ರೇಡಿಯೋ ಅಂಡ್ ಎಲೆಕ್ಟ್ರಿಕಲ್ಸ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯಲ್ಲಿ, ಎಲೆಕ್ಟ್ರಾನಿಕ್, ಎಂಜಿನಿಯರಿಂಗ್ ಗುಡ್ಸ್., ಎನರ್ಜಿ ಮೀಟರ್ಸ್. ಕೇಬಲ್ಸ್, ಕ್ಯಪಾಸಿಟರ್ಸ್, ರೇಡಿಯೋಗಳು, ಟೆಲಿವಿಜನ್ ರಿಸೀವರುಗಳು, ಲೌಂಡ್ ಸ್ಪೀಕರುಗಳು ಮುಂತಾದ ಉಪಕರಣಗಳನ್ನು ತಯಾರು ಮಾಡುತ್ತಿದ್ದಾರೆ. ತಮಗೆ ತಿಳಿದ ಹಾಗೆ ಬೆಂಗಳೂರು ನಗರದಲ್ಲಿ ಎಲೆಕ್ಟ್ರಾನಿಕ್ ಇಂಡಸ್ಟ್ರಿಯಲ್ಲಿ ಅಂತರ ರಾಷ್ಟ್ರೀಯ ಖ್ಯಾತಿಯನ್ನು ಪಡೆದಿರತಕ ೧೦೦ಕ್ಕಿಂತ ಹೆಚ್ಚು ದೊಡ್ಡ ದೊಡ್ಡ ಮಧ್ಯಮ ವರ್ಗದ ಮತ್ತು ಸಣ್ಣ ಪುಟ್ಟ ಎಲೆಕ್ಟ್ರಾನಿಕ್ ಕೈಗಾರಿಕೆಗಳು ಇವೆ ಇವು ಸಾಕಷ್ಟು ಖ್ಯಾತಿಯನ್ನು ಪಡೆದಿವೆ. ಈ ಎಲೆಕ್ಟ್ರಾನಿಕ್ ಇಂಡಸ್ಟ್ರಿ ಮುಖಾಂತರ ಫಾರಿನ್ ಎಕ್ಸ್‌ಚೇಂಜ್‌ನ್ನುಗಳಿಸಲು ಮಾಡತಕ್ಕ ಕಾರ್ಖಾನೆಗಳು ಸಣ್ಣಪುಟ್ಟ ಕಾರ್ಖಾನೆಗಳು ಇವೆ: ಇಂಥಾ ಒಂದು ಖ್ಯಾತಿಯನ್ನು ಪಡೆದಿರತಕ್ಕ ಬೆಂಗಳೂರು ನಗರದಲ್ಲಿರತಕ್ಕ ರೆಮ್‌ಕೋ ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್ ಅನ್ನು ನಮ್ಮ ಸರ್ಕಾರದವರು ಭಾರತ್ ಹೆವಿ ಎಲೆಕ್ಟ್ರಾನಿಕ್ ಲಿಮಿಟೆಡ್ ಕಂಪನಿಗೆ ವರ್ಗಾವಣೆ ಮಾಡುತ್ತಿರುವುದು ದುರದೃಷ್ಟಕರವಾದುದು ಎಂದು ನಾನು ಹೇಳುತ್ತೇನೆ. ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದಂತೆ ಈ ಕಾರ್ಖಾನೆಯಲ್ಲಿ ನಷ್ಟವನ್ನುಂಟು ಮಾಡುವುದಕ್ಕೆ ಯಾರು ಕಾರಣರು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಸರ್ಕಾರದವರು ಯಾವಾಗ ಇದಕ್ಕೆ ಡೈರೆಕ್ಟರುಗಳನ್ನು ನೇಮಕ ಮಾಡಿದ್ದಾರೆಯೋ ಆಗ ಇದರಲ್ಲಿ ನಷ್ಟವಾಗುವುದಕ್ಕೆ ಸರ್ಕಾರದ ನೀತಿಯೇ ಕಾರಣ ಎಂದು ನಾವು ಹೇಳಬೇಕಾಗುತ್ತದೆ. ಎಲ್ಲೆಲ್ಲಿ ಸರ್ಕಾರ ಇನ್‌ವೆಸ್ಟ್‌ಮೆಂಟ್ ಮಾಡಿದೆ ಅಲ್ಲೆಲ್ಲಾ ತನ್ನ ಅದಕ್ಷತೆಯಿಂದ ಕೈಗಾರಿಕಾ ನೀತಿಗೆ ವಿರೋಧವಾಗಿ ನಡೆದುಕೊಂಡಿರುವುದರಿಂದ ಅಲ್ಲಿ ಸರ್ಕಾರ ಸೋಲನ್ನು ಅನುಭವಿಸುತ್ತಿದೆ. ಸರ್ಕಾರ ನಷ್ಟವನ್ನು ಅನುಭವಿಸಿದೆ, ಇದೇ ಮೊದಲನೆಯದೇನೂ ಅಲ್ಲ. ನಮಗೆ ತಿಳಿದ ಹಾಗೆ ಅನೇಕ ಕಾರ್ಖಾನೆಗಳನ್ನು

ಟಾಟಾ ಬಿರ್ಲಾ ಅವರಿಗೆ ಹ್ಯಾಂಡ್ ಓವರ್ ಮಾಡಿದ್ದಾರೆ. ಕೇಂದ್ರ ಸರ್ಕಾರದವರಿಗೆ ಕೊಟ್ಟಿದ್ದಾರೆ ಸರ್ಕಾರದ ಕೈಗಾರಿಕಾ ನೀತಿ ಇಷ್ಟು ಅಸಮರ್ಥವಾಗಿದ್ದರೂ ಕೈಗಾರಿಕೆ ವಿಫಲತೆಯನ್ನು ಹೊಂದಿದ್ದರೂ ಕೂಡ ಹೊಸ ಕೈಗಾರಿಕೆಗಳು ಬೇಕು ಎಂದು ಕೇಳುವುದು ಬಹಳ ದುರದೃಷ್ಟಕರವಾದ ವಿಚಾರ. ರಾಜ್ಯ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಸಂಗ್ರಹಿಸಿ ಅದಕ್ಕೆ ಬಂಡವಾಳವನ್ನು ಹಾಕಿ ಅವುಗಳನ್ನು ನಡೆಸುವುದಕ್ಕೆ ಪ್ರಯತ ಮಾಡಿ ಇವೊತ್ತು ವೈಫಲ್ಯವನ್ನು ಎದುರಿಸುತ್ತಿವೆ. ಪೋರ್ಸಿಲೈನ್ ಫ್ಯಾಕ್ಟರಿಯನ್ನು ರಾಜ್ಯ ಸರ್ಕಾರ ಸರಿಯಾಗಿ ನಡೆಸುತ್ತಾ ಇಲ್ಲ. ಅದರ ನೌಕರರಿಗೆ ಸರಿಯಾಗಿ ಸಂಬಳ ಸಾರಿಗೆಯನ್ನು ಕೊಡುತ್ತಾ ಇಲ್ಲ. ಬೋನಸ್ ಕೊಟ್ಟಿಲ್ಲ. ಏನೋ ಸ್ವಲ್ಪ ಮಿನಿಮಮ್ ಇಷ್ಟು ಎಂದು ಬೋನಸ್ ಕೊಟ್ಟಿರಬಹುದು. ತುರ್ತು ಪರಿಸ್ಥಿತಿಯಲ್ಲಿ ನೌಕರರಿಗೆ ಬೋನಸ್ ಕೊಟ್ಟಿಲ್ಲ. ಈಗ ರೆಂಕೋ ಕಂಪೆನಿ ಮತ್ತು ಪೋರ್ಸಲೈನ್ ಕಂಪೆನಿ ಇವೆರಡನ್ನೂ ಸಹ ಭಾರತ್ ಹೆವಿಎಲೆಕ್ಟ್ರಾನಿಕ್ ಕಂಪೆನಿಗೆ ಕೊಡುತ್ತಿದ್ದಾರೆ. ಇದನ್ನು ಅವರಿಗೆ ವಹಿಸಿ ಕೊಡುವುದರ ಬಗ್ಗೆ ಅಗ್ರಿಮೆಂಟ್ ಏನಿದೆ, ಲೇಬರರ್ಸ್ ಇಂಟರೆಸ್ಟನ್ನು ಸೇಫ್‌ಗಾ ರ್ಡ ಮಾಡುವ ವಿಷಯ ಆ ಅಗ್ರಿಮೆಂಟಿನಲ್ಲಿ ಸೇರಿದೆಯೋ? ಭಾರತ್ ಹೆವಿ ಎಲೆಕ್ಟ್ರಾನಿಕ್ ಕಂಪೆನಿಯವರು ಅನೇಕ ಕಡೆ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ. ಆದ್ದರಿಂದ ಅವರು ಈ ನಮ್ಮ ಕಂಪೆನಿಯಲ್ಲಿ ಇರತಕ್ಕ ನೌಕರರಿಗೆ ಕಾರ್ಮಿಕರಿಗೆ ಇತರ ಕಾರ್ಖಾನೆಗಳಲ್ಲಿರುವ ಸಂಬಳ ಸಾರಿಗೆಯನ್ನು ಕೊಡುವುದಕ್ಕೆ ಆ ಕಂಪೆನಿಯವರು ಒಪ್ಪಿಕೊಂಡಿದ್ದಾರೆಯೋ? ಅವರು ಈ ಕಾರ್ಮಿಕರ ಇಂಟರೆಸ್ಟ್ ಅನ್ನು ಸೇಫ್ ಗಾರ್ಡ್ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆಯೋ? ಈ ಉದ್ದಿಮೆಗಳನ್ನು ಆ ಕಂಪೆನಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಏನಾದರೂ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆಯೋ? ಈ ಕಂಪೆನಿಯ ನೌಕರರಿಗೆ ಕಾರ್ಮಿಕರಿಗೆ ಕೊಡಬೇಕಾದ ಗ್ರಾಚ್ಯುಟಿ. ಪ್ರಾವಿಡೆಂಟ್ ಫಂಡ್ ಇತ್ಯಾದಿ ಸೌಲಭ್ಯಗಳನ್ನು ಕೊಡುವ ಬಗ್ಗೆ ಅಗ್ರಿಮೆಂಟಿನಲ್ಲಿ ಸೇರಿಸಿದ್ದಾರೆಯೋ? ಅದಕ್ಕೆ ಸಂಬಂಧಪಟ್ಟ ಅಗ್ರಿಮೆಂಟ್ ಅನ್ನು ಈ ಸಭೆಯ ಮುಂದೆ ಇಡಬೇಕು. ಬೇರೆ ಕಡೆಯಿಂದ ಇಲ್ಲಿಗೆ ನೌಕರರನ್ನು ಕರೆಸತಕ್ಕ ಏರ್ಪಾಡನ್ನು ಮಾಡಿದ್ದಾರೆಯೋ? ಸ್ಥಳೀಯರಿಗೆ ಈ ಕಂಪೆನಿಯಲ್ಲಿ ಹೆಚ್ಚಿನ ಅವಕಾಶವನ್ನು ಕೊಡಬೇಕು. ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿಯೂ ಕೂಡ ರಾಜ್ಯದ ಜನತೆಗೆ ಕೆಲಸಗಳನ್ನು ಸಿಕ್ಕುವಂತಹ ಅವಕಾಶ ಇರಬೇಕು. ಈ ಒಂದು ಬೇಡಿಕೆಯನ್ನು ನಾವು ಹಲವಾರು ವರ್ಷಗಳಿಂದ ಸರ್ಕಾರದ ಮುಂದೆ ಇಡತ್ತಿದ್ದೇವೆ. ನಮ್ಮ ಕೈಗಾರಿಕೆಗಳನ್ನು ಕೇಂದ್ರಕ್ಕೆ ವಹಿಸಿದ ನಂತರ ಅವರು ಏನು ಮಾಡುತ್ತಾರೆ ಎನುವುದನ್ನು ಹೇಳುವುದಕ್ಕಾಗುವುದಿಲ್ಲ.

ಕುದುರೆ ಮುಖ ಕಬ್ಬಿಣ ಕಾರ್ಖಾನೆಯಲ್ಲಿ ಸ್ಥಳೀಕರು ಇಲ್ಲವೇ ಇಲ್ಲ, ಮಂಗಳೂರು ಫರ್ಟಿಲೈಸರ್ ಕಾರ್ಖಾನೆಯಲ್ಲೂ ಹಾಗೇ ಇದೆ. ಈ ರೀತಿ ಕಾರ್ಖಾನೆಯನ್ನು ಕೇಂದ್ರ ಸರ್ಕಾರಕ್ಕೆ ಹ್ಯಾಂಡ್‌ಓವರ್ ಮಾಡುವಾಗ ನಮ್ಮ ವರ್ಕರ್ಸ್ ಇಂಟರೆಸ್ಟ್ ಪ್ರೊಟೆಸ್ಟ್ ಮಾಡುವುದು, ನಮ್ಮ ಜನತೆಯ ಇಂಟರೆಸ್ಟ್ ಪ್ರೊಟೆಕ್ಟ್ ಮಾಡುವುದು ಏನಾದರೂ ಇದೆಯೋ ಎಂದು ನೋಡಬೇಕು. ಮಹಾರಾಷ್ಟ್ರದಲ್ಲಿ ನೂರಕ್ಕೆ ನೂರು ಜನ ಸ್ಥಳೀಕರನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದಾರೆ. ಮಾನ್ಯ ಶಾಮಣ್ಣನವರು ೩೦ ರೂಪಾಯಿ ಬರುತ್ತದೆ ಹೋದರೆ ಹೋಗಲಿ ಎಂದು ಹೇಳಿದರು. ರಾಜ್ಯಸರ್ಕಾರದವರು ಒಂದೂಕಾಲು ಕೋಟಿ ಇದ್ದರೆ ಷೇರ್ ಹೋಲ್ಡರ್ಸ್‌ದು ೨೯.೮೭ ಲಕ್ಷ ರೂಪಾಯಿಗಳು ಇದೆ. ಷೇರ್ ಹೋಲ್ಡರ್ಸ್ ಬರೀ ಸಾಹುಕಾರರೇ ಅಲ್ಲ, ಮಿಡ್ಲ್‌ಕ್ಲಾಸ್ ಜನ ಇದ್ದಾರೆ, ವರ್ಕರ್ಸ್ ಇದ್ದಾರೆ. ಒಂದೊಂದು ಷೇರನ್ನು ಕೊಂಡುಕೊಂಡಿರತಕ್ಕ ಜನ ಇದ್ದಾರೆ. ಸರ್ಕಾರಿ ನೌಕರರು ರಿಟೈರ್ ಆದಮೇಲೆ ತಮ್ಮ ಹಣವನ್ನು ಕಾರ್ಖಾನೆಯಲ್ಲಿ ತೊಡಗಿಸಿದ್ದಾರೆ. ಸರ್ಕಾರದವರು ಹಣ ತೊಡಗಿಸುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ೧೦ ರೂಪಾಯಿಗೆ ೩ ರೂಪಾಯಿ ಕೊಡುತ್ತಾರೆ ಇದು ಎಂತಹ ಸಾಮಾಜಿಕ ನ್ಯಾಯ. ೧೦ ರೂಪಾಯಿ ಕೊಡುವುದಕ್ಕೆ ಏನು ತೊಂದರೆಯಾಗುತ್ತದೆ. ಈ ಸಂಸ್ಥೆಯನ್ನು ಕೇಂದ್ರ ಸರ್ಕಾರದ ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸಂಸ್ಥೆಗೆ ಹ್ಯಾಂಡ್ ಓವರ್ ಮಾಡತಕ್ಕಂಥ ಒಂದು ದಿಶೆಯಲ್ಲಿ ಅವರ ಅಸೆಟ್ಸ್ ಅಂಡ್ ಲಯಬಿಲಿಟೀಸನ್ನು ತೆಗೆದುಕೊಳ್ಳುವಾಗ ಅಸೆಟ್ಸನ್ನು ಮಾರ್ಕೆಟ್ ವ್ಯಾಲ್ಯುಯೇಷನ್ ಮಾಡಬೇಕಾಗಿದೆ. ಮಾನ್ಯ ಕೈಗಾರಿಕಾ ಸಚಿವರು ಈ ವಿಷಯವನ್ನು ಗಮನಿಸಿದ್ದಾರೆಂದು ಕಾಣುತ್ತದೆ. ಅಸೆಟ್ಸ್‌ನ್ನು ಮಾರ್ಕೆಟ್ ವ್ಯಾಲ್ಯುಯೇಷನ್ ಮಾಡಿಲ್ಲ, ಮೈಸೂರು ಸ್ಪಿನ್ನಿಂಗ್ ಮಿಲ್ಸ್ ಏನಿದೆ ಅದರಲ್ಲೂ ಕೂಡ ಮಾರ್ಕೆಟ್ ವ್ಯಾಲ್ಯೂಯೇಷನ್ ಮಾಡುತ್ತಾ ಇಲ್ಲ. ಹೀಗೆ ಬ್ಯಾಲೆನ್ಸ್ ಶೀಟ್‌ನಲ್ಲಿ ಕಡಿಮೆ ತೋರಿಸಿ ಇವರು ಹೆಚ್ಚಿಗೆ ಹಣ ತೆಗೆದುಕೊಳ್ಳತಕ್ಕ ಪರಿಸ್ಥಿತಿ ಉಂಟಾಗಿ ಕೊನೆಯಲ್ಲಿ ಷೇರ್ ಹೋಲ್ಡರ್ಸ್‌ಗೆ ತೊಂದರೆ ಮಾಡುತ್ತಾ ಇದ್ದಾರೆ. ಷೇರ್ ಹೋಲ್ಡರ್ಸ್‌ಗೆ ಕೊಟ್ಟಿರತಕ್ಕ ಹಣ ಸಾಲದು. ಮೈಸೂರು ಸ್ಪಿನ್ನಿಂಗ್ ಮಿಲ್ಸ್‌ನಲ್ಲೂ ಇದೇ ರೀತಿ

ಮಾಡುತ್ತಾ ಇದ್ದಾರೆ. ಷೇರ್ ಹೋಲ್ಡರ್ಸ್ ಬಡವರಿದ್ದಾರೆ, ಅವರಿಗೆ ಹೆಚ್ಚು ಹಣ ಕೊಡಬೇಕು. ಅವರೇನು ಟಾಟಾ, ಬಿರ್ಲಾ ಯಾರೂ ಅಲ್ಲ. ರಿಟೈರ ಆಗಿರತಕ್ಕ ಕಾರ್ಮಿಕರು ಅಲ್ಲಿ ಷೇರನ್ನು ಹಾಕಿರುತ್ತಾರೆ. ಈಗ ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಸಂಸ್ಥೆಗೆ ಈ ಸಂಸ್ಥೆಯನ್ನು ಏನು ಹ್ಯಾಂಡ ಒವರ್ ಮಾಡುತ್ತಿದ್ದಾರೆ, ಆ ಸಂಸ್ಥೆ ಎಫಿಷಿಯೆಂಟಾಗಿದೆಯೋ, ಪ್ರಾಫಿಟಬಲ್ ಆಗಿ ನಡೆಯುತ್ತಿದೆಯೋ ಎಂದು ನಾವು ನೋಡಬೇಕು. ನಮ್ಮ ಭಾರವನ್ನು ಬೇರೆಯವರ ತಲೆಯ ಮೇಲೆ ಹಾಕಿ ನಾವು ಕೈ ತೊಳೆದುಕೊಂಡು ಕುಳಿತುಕೊಳ್ಳುವುದಲ್ಲ. ಈ ಸಂಸ್ಥೆಯಲ್ಲಿ ಏನೇನು ತೊಂದರೆಗಳಿದೆಯೋ ಅದು ಅಲ್ಲೂ ಸ್ವಲ್ಪ ಹೆಚ್ಚು ಕಡಿಮೆ ಅದೇ ತೊಂದರೆಗಳಿರುತ್ತವೆ. ಇನ್ನು ಮುಂದೆ ಸರ್ಕಾರ ಕಾರ್ಖಾನೆಗಳಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕಾಗಿದೆ. ನಾವು ನಿರ್ಮಾಣ ಮಾಡುವುದು, ಅದನ್ನು ಬೇರೆಯವರಿಗೆ ಕೊಡುವುದು ಸಾಧುವಾದುದಲ್ಲ ಎಂದು ಒತ್ತಾಯಪೂರ್ವಕವಾಗಿ ಹೇಳಿ, ನಾನು ಕೆಲವೊಂದು ಪ್ರಶ್ನೆಗಳನ್ನು ಏನು ಕೇಳಿದ್ದೇನೆ, ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್ (ಭಾರತೀನಗರ).—ಮಾನ್ಯ ಸಭಾಧ್ಯಕ್ಷರೇ, ಈ ಒಂದು ರೆಂಕೋ ಕಾರ್ಖಾನೆ ನಮ್ಮ ರಾಜ್ಯ ಸರ್ಕಾರದ ಆಶ್ರಯದಿಂದ ಕೇಂದ್ರ ಸರ್ಕಾರದ ಆಶ್ರಯಕ್ಕೆ ಒಂದು ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಆಗಿ ಟ್ರಾನ್ಸ್‌ಫರ್ ಆಗುವಂಥಾದ್ದನ್ನು ನಾನು ವೈಯುಕ್ತಿಕವಾಗಿ ಸ್ವಾಗತಿಸುತ್ತಿದ್ದೇನೆ ಅನೇಕ ಕಾರ್ಮಿಕರೂ ಕೂಡ ಇದನ್ನು ಸ್ವಾಗತಿಸಿದ್ದಾರೆ. ಇದರಿಂದಾಗಿ ನಾನು ಈ ಒಂದು ಬಿಲ್ಲನ್ನು ವಿರೋಧಿಸುತ್ತಾ ಇಲ್ಲ. ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುತ್ತಾ ಇದ್ದೇನೆ. ಈ ಕಾರ್ಖಾನೆಯು ಬಹುಶಃ ಸೆಂಟ್ರಲ್ ಇಂಡಸ್ಟ್ರೀಸ್‌ಗಿಂತ ಪ್ರಾಯದಲ್ಲಿ ಹೆಚ್ಚು ವರ್ಷವಾಗಿದೆ. ರೇಡಿಯೋ ಅಂಡ್ ಎಲೆಕ್ಟ್ರಿಕಲ್ ಕನ್ಸ್ಯೂಮರ್ ಉಪಕರಣಗಳನ್ನು ಹೆಚ್ಚಿನ ರೀತಿಯಲ್ಲಿ ನಮ್ಮ ದೇಶದಲ್ಲಿ ತಯಾರುಮಾಡಿ ಮಾರಾಟವಾಗುವ ಸಮಯದಲ್ಲಿ, ಇಷ್ಟು ಹಳೆಯ ಕಾರ್ಖಾನೆಯು ನಮ್ಮ ರಾಜ್ಯಸರ್ಕಾರದ ನಿರ್ಲಕ್ಷ್ಯದಿಂದ ಈ ಸ್ಥಿತಿಗೆ ಬಂದಿದೆಯೆಂದು ನಾವು ತಿಳಿದುಕೊಳ್ಳುವುದಾದರೆ ಇದಕ್ಕೆ ಮುಖ್ಯ ಕಾರಣವೇನು ಎಂದು ನಾವು ನೋಡಬೇಕಾಗಿದೆ. ಬಹುಶಃ ಪಬ್ಲಿಕ್ ಸೆಕ್ಟರ್‌ನಲ್ಲಿ ಏನೊಂದು ಆಸಕ್ತಿ ಇಲ್ಲದೇ ಇರತಕ್ಕಂಥಾವರನ್ನು ಈ ಕಾರ್ಖಾನೆಗಳನ್ನು ನಡೆಸಲಿಕ್ಕೆ ಕಳುಹಿಸಿಕೊಟ್ಟು ಅವರು ಕಾರ್ಖಾನೆಯಲ್ಲಿ ಜಾಸ್ತಿ ಉತ್ಪಾದನೆಯಾಗುವ ಬದಲು ನಾನಾ ತರದ ರಾಜಕೀಯ ಹಾಗೂ ಖಾಸಗೀ ವರ್ಗದವರೊಡನೆ ಸಂಪರ್ಕ ಇಟ್ಟುಕೊಂಡು ಈ ಕಾರ್ಖಾನೆಗಳನ್ನು ಸಾಬೊಟೇಜ್ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದಿಂದ ಇನ್‌ವೆಸ್ಟ್‌ಮೆಂಟ್ ಆದ ಈ ಕಾರ್ಖಾನೆಯನ್ನು ಸರಿಯಾದ ರೀತಿಯಲ್ಲಿ ನಡೆಸದೇ ಹೋದ್ದರಿಂದ ಇದರಲ್ಲಿ ಒಂದು ಅಕೌಂಟಬಿಲಿಟಿ ಇಲ್ಲ ಎಂದು ನನಗೆ ತೋರುತ್ತದೆ. ನಮ್ಮ ರಾಜ್ಯಸರ್ಕಾರದ ಆಶ್ರಯದಲ್ಲಿ ಇನ್ನೂ ಅನೇಕ ಕಾರ್ಖಾನೆಗಳು. ಆ ಕಾರ್ಖಾನೆಗಳು ಸರಿಯಾದ ರೀತಿಯಲ್ಲಿ ನಡೆಯಬೇಕಾದರೆ, ಲಾಭದಲ್ಲಿ ಬೆಳೆಯಬೇಕಾದರೆ ಒಂದು ಅಕೌಂಟಬಿಲಿಟಿ ಕೂಡ ಇರಬೇಕು. ಕಾರ್ಖಾನೆಯಲ್ಲಿ ಯಾರು ತಪ್ಪು ಮಾಡುತ್ತಾರೋ, ಕಾರ್ಖಾನೆಯನ್ನು ಯಾರು ದುಸ್ಥಿತಿಗೆ ತೆಗೆದುಕೊಂಡು ಬರುತ್ತಾರೋ ಅವರಿಗೆ ಶಿಕ್ಷೆ ಕೊಡುವಂಥ ಒಂದು ವಿಧಾನ ಇರಬೇಕು. ಉದಾಹರಣೆಗೆ ಹೇಳುವುದಾದರೆ ಈ ಕಾರ್ಖಾನೆಗಳಲ್ಲಿ ಅನೇಕ ಬಾರಿ ರೆಕ್ರೂಟ್‌ಮೆಂಟ್ ಮಾಡುವಾಗ ಕೆಲವು ತಪ್ಪುಗಳು ಆಗುತ್ತವೆ. ಈ ರೀತಿ ತಪ್ಪುಗಳು ಆಗುವುದಕ್ಕೆ ಯಾರು ಮ್ಯಾನೇಜಿಂಗ್ ಡೈರಕ್ಟರು ಆಗಿರುತ್ತಾರೆ, ಯಾರು ಛೇರ್ಮನ್ ಆಗಿರುತ್ತಾರೆ ಅವರು ಮಾತ್ರ ಕಾರಣರು ಎಂದು ಹೇಳುವಹಾಗಿಲ್ಲ. ಕೆಲವು ಸಲ ಮಿನಿಸ್ಟರುಗಳು ಕೂಡ ಇದಕ್ಕೆ ಕಾರಣರು ಎಂದು ಸಾಮಾನ್ಯ ಮಟ್ಟದ ಕಾರ್ಮಿಕನು ಕೂಡ ಹೇಳುತ್ತಾನೆ. ಯಾರೋ ಮಿನಿಸ್ಟರು ೧೦ ಜನರನ್ನು ಕಳುಹಿಸಿಕೊಟ್ಟರೆ ಕೆಲಸ ಇರಲಿ ಇಲ್ಲದಿರಲಿ ಅವರನ್ನು ತೆಗೆದುಕೊಳ್ಳಬೇಕು. ಯಾರೋ ಒಬ್ಬರಿಗೆ ಆಫೀಸರ್ ಮಟ್ಟದಲ್ಲಿ ಒಂದು ಪೊಸಿಷನ್ ಕೊಡಬೇಕಾದರೆ ಇಂತಹ ಒಂದು ಕಾರ್ಖಾನೆಗೆ ಕಳುಹಿಸಿ ಕೊಡುವುದು. ಹೀಗೆ ಮಾಡುವುದರಿಂದ ಆಫೀಸಸ್ ಮಟ್ಟದಲ್ಲಿ ಕೇಡರ್ ಎಕ್ಸ್‌ಪಾನ್‌ಷನ್ ಆಗುತ್ತದೆಯೋ ವಿನಹ ಉತ್ಪಾದನೆಯಲ್ಲಿ ಮತ್ತು ಮಾರ್ಕೆಟಿಂಗ್ ಅಫೇರ್ಸ್‌ನಲ್ಲಿ ಇಂಪ್ರೂವ್‌ಮೆಂಟ್ ಆಗುತ್ತಾ ಇಲ್ಲ. ಜನರಿಗೆ ಕೆಲಸದಲ್ಲಿ ಆಸಕ್ತಿ ಕಡಿಮೆಯಾಗಿ ಪ್ರಾಫಿಟಬಿಲಿಟಿ ಮತ್ತು ಎಫಿಷಿಯನ್ಸಿ ಕಡಿಮೆಯಾಗಿ ಹೋಗುತ್ತಾ ಇದೆ. ಸರ್ಕಾರದ ಆಶ್ರಯದಲ್ಲಿರತಕ್ಕ ಕಾರ್ಖಾನೆಗಳಲ್ಲಿ ರೆಕ್ರೂಟ್‌ಮೆಂಟ್ ಮಾಡುವಾಗ ಅವಶ್ಯಕತೆ ಇದ್ದಷ್ಟು, ಮಾತ್ರ ಜನರನ್ನು ಆಫೀಸರ್ಸ್ ಮಟ್ಟದಲ್ಲಿ ಇಟ್ಟುಕೊಳ್ಳುತ್ತಾರೋ ಅಥವಾ ಮಿನಿಸ್ಟರುಗಳಿಂದ ಮ್ಯಾನೇಜಿಂಗ್ ಡೈರಕ್ಟರ್‌ವರೆಗೆ ಅವರಿಗೆ ಬೇಕಾದ ರೀತಿಯಲ್ಲಿ ಜನರನ್ನು ತೆಗೆದುಕೊಳ್ಳುತ್ತಾರೊ ನೋಡಬೇಕಾಗಿದೆ. ಕೆಲವು ಬಾರಿ ಛೇರ್ಮನ್ ಅಪಾಯಿಂಟ್‌ಮೆಂಟ್ ಪೊಲಿಟಿಕಲ್ ಅಪಾಯಿಂಟ್‌ಮೆಂಟ್

ಆಗಿಹೋಗುತ್ತದೆ. ಅವರು ಎಲೆಕ್ಷನ್‌ನಲ್ಲಿ ಡಿಫೀಟ್ ಆದ ಕ್ಯಾಂಡಿಡೇಟ್ ಆಗಿರಬಹುದು, ಅಥವಾ ಹಿಂದೆ ಆಡಳಿತ ಪಕ್ಷಕ್ಕೆ ಸಹಾಯ ಮಾಡಿದಂಥ ವ್ಯಕ್ತಿಯಾಗಿರಬಹುದು, ಅಂತಹವರಿಗೆ ಛೇರ್ಮನ್‌ಶಿಫ್ ಹೋಗುತ್ತದೆ. ಅವರಿಗೆ ಕಂಪೆನಿಯ ವಿಚಾರ ಏನೂ ಗೊತ್ತಿರುವುದಿಲ್ಲ, ಅವರು ಕಂಪನಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಬದಲು ಅವರು ಅಲ್ಲಿ ರಾಜಕೀಯ ವಿಚಾರವನ್ನು ಬೆಳೆಸಿಕೊಂಡು ಬರುತ್ತಾ ಇರುತ್ತಾರೆ. ಆದುದರಿಂದ ಇದನ್ನು ರದ್ದು ಮಾಡುವಂಥ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು. ಉದಾಹರಣೆಗೆ ರೆಂಕೋ ಬಗ್ಗೆ ಹೇಳುವುದಾದರೆ, ಅಲ್ಲಿ ಮಾರ್ಕೆಟಿಂಗ ಟೆಕ್ನಿಕ್ಸ್ ಸರಿಯಾಗಿರುವುದಿಲ್ಲ ಡೈವರ್ಸಿಫಿಕೇಷನ್ ಆಫ್ ಪ್ರಾಡಕ್ಟ್ಸ್ ಸರಿಯಾಗಿರುವುದಿಲ್ಲ. ೪೦ ವರ್ಷಗಳ ಹಿಂದೆ ಯಾವರೀತಿ ಇತ್ತೋ ಇವತ್ತೂ ಕೂಡ ಅದೇ ಮಟ್ಟದಲ್ಲಿ ಕಾರ್ಖಾನೆಗಳು ಇವೆ. ಪೋರ್ಸ್‌ಲಿನ್ ಫ್ಯಾಕ್ಟರಿಯಲ್ಲೂ ಕೂಡ ಇದೇ ಒಂದು ಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಇವತ್ತಿನ ದಿವಸ ಮಾಡ್ರನ್ ಬಿಜಿನೆಸ್ ಲೈನ್‌ನಲ್ಲಿ ಕಾರ್ಖಾನೆಗಳನ್ನು ನಡಸಿದರೆ ಮಾತ್ರ ಈ ಕಾರ್ಖಾನೆಗಳಲ್ಲಿ ನಾವು ಏನು ಇನ್‌ವೆಸ್ಟ್‌ಮೆಂಟ್ ಮಾಡಿರುತ್ತೇವೋ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡ ಹಾಗೆ ಆಗುತ್ತದೆ. ಡೈವರ್ಸಿಫಿಕೇಷನ್ ಮಾಡಿದರೆ ಎಂಪ್ಲಾಯಿಮೆಂಟ್ ಜಾಸ್ತಿ ಮಾಡಲಿಕ್ಕೆ ಆಗುತ್ತದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ಆಸಕ್ತಿ ಇದ್ದವರಿಗೆ ಕಾರ್ಖಾನೆಗಳಲ್ಲಿ ಮೇಲಧಿಕಾರ ಕೊಟ್ಟರೆ ಇಂತಹ ಒಂದು ದುಸ್ಥಿತಿ ಬರುತ್ತಾ ಇರಲಿಲ್ಲ. ಈ ಕಾರ್ಖಾನೆಗಳನ್ನು ಟ್ರಾನ್ಸ್‌ಫರ್ ಮಾಡುವಂಥ ಅವಶ್ಯಕತೆ ಬರುತ್ತಾ ಇರಲಿಲ್ಲ. ಇನ್ನು ಮುಂದಾದರೂ ರಾಜ್ಯ ಸರ್ಕಾರದ ಆಶ್ರಯದಲ್ಲಿರತಕ್ಕ ಬೇರೆ ಕಾರ್ಖಾನೆಗಳಿಗೆ ಇಂತಹ ದುಸ್ಥಿತಿ ಬರದ ಹಾಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಂಡು, ಈ ಕಾರ್ಖಾನೆಯನ್ನು ಪಬ್ಲಿಕ್ ಸೆಕ್ಟರ್‌ನಲ್ಲಿ ಉಳಿಸಿಕೊಂಡಿದ್ದಕ್ಕೆ ಸಂತೋಷಪಟ್ಟು, ನನ್ನ ಮಾತನ್ನು ಮುಗಿಸುತ್ತೇನೆ.

†SRI AZIZ SAIT (Minister for Industries and Commerce).—Madam Speaker, I am grateful to the Hon'ble Members for having elaborately discussed about the norms and the possibilities and about what should have been done. They said that if the Government had done certain things, probably, this would have remained as a State undertaking. It is too late for me to do anything; already deals have been over, shares have been acquired by an Ordinance and now, I have just come before you to replace the Ordinance by a Bill.

There are very intersting points raised during the discussion. At the outset, I must thank Mr. Fernandes and Mr. Kakkilaya for having welcomed the measure. But other friends spoke at length and said that the Government turned a deaf ear to the public sector undertaking. I would like to assure you that for all the things that happened, I am not responsible. I assure you I will take into consideration every aspect of it and I will see that a person who makes an error is dealt with. I have got my responsibilities as a Minister for Industries to develop the industries in the State of Karnataka. But one should not feel sorry for this handing over of the undertaking to the Government of India undertaking. I hope all of you will join with me in the view that the Government of Karnataka has not made an error in making over this factory to the Government of India undertaking. REMCO was producing meters cables, radios and T. Vs., etc. They were impossible to be marketed for the simple reason that they had the heaviest competition from other units in private sector. I was trying to dig out that file. I don't know at that time Sri Nijalingappa or Sri Veerendra Patil was there. But this Government was not commit

ted to that. This Government approached the problem very cautiously. We wanted to have it or to hand it over to the public sector under taking. As on 31st March 1977, the assets and liabilities are as follows:

Liabilites.—

Share Capital	...	Rs. 75 lakhs
Secured loan	...	Rs. 199.93 lakhs
Unsecured loan	...	Rs. 424.23 lakhs,
current liability	...	Rs. 114.97 lakhs,

Assets.—

Fixed assets	...	Rs. 113.72 lakhs,
Current assets	...	Rs. 262.04 lakhs.
Total Rs. 375.76 lakhs		

The excess liabilities over assets Rs. 438.37 lakhs

This extra liability will be borne by B. H. E. L. If it had not been handed over to BHEL, the Government of Karnataka would have absorbed this extra liability. By handing over the entire loan will be absorbed by B. H. E. L. and the total loss as on 31st March 1977 has already been mentioned by me. I could not secure the full information but according to the information available with me, it is about Rs. 580.86 lakhs is the total loss. On shares the loss to the State Government comes to about Rs. 127.44 lakhs *i.e.*, out of the total value of the shares (Rs. 182.46 lakhs)

As regards agreement. I would like to say here that it is a very simple deed of handing over and taking over. But as far as workers are concerned, they are governed by Factories Act, Labour Act, etc., and since B.H.E.L. is having thousands of employees, one need not scare that the labourers interest are not secured. There is a Gentlemans agreement between B. H. E. L. and Government to the effect that the conditions of the workers would be improved. The B. H. E. L. has got diversifaction plans and they are going to invest Rs. 4–5 Crores. So, that means, there will be huge expansion in this unit. Once it is expanded, the employment potential will also be improved. I am also one among the hon. Members to share the views that the Karnataka industries must give more employment to the people of our State. But that is a very ticklish question. Many a times, it has been discussed in this House. How to solve this problem is a question. In this connection, I assure that I shall try my best to see that all those industries which are under the Government control and all those industries which are coming up in the private sector will maintain the ratio. I would like to tell my hon. Friends

here that our chaps are not alert in seeing the advertisements and the requirements of the industries. They come through cross road. When they get interview they will come and approach us for recommending their names for appoinmetnt. Many of the chaps come to me with an application for appointment in private industries also. As Minister and also M. L. As we have to oblige them and I myself had recommended so may cases for appointment in Private industries also. I agree with the points raised by my friend Mr.Fernandes that these private industries are over burdened because of this political consideration. As I bear with Mr. Fernandes with this point I assure that I would not do that mistake and I will give strict instructions to the Officers and also to the Departmental Heads at the factory concerned not to yield for such things wherever there is overburden on the industries and see that these industries are not burdened.

Sir, I share the feelings of all the members and the remarks they have made and suggestions they have thrown and I will take them as guidelines. I also sympathise with my oldest friend Mr. Shamanna, that because of this measure he had to incur loss of about Rs. 70 per share. I am sure Mr. Shamanna will bear with me. This seventy rupees is nothing for him. Industries will grow more freely and many industries will come out with success. I sympathise all the shareholders who lost 70 rupees per share.

THE CHAIRMAN.— I will not put the consideration motion to the vote of the House the question, is,

"That the Karnataka Radio and Electrical Company (Acquisition of Shares) Bill, 1978 be taken into consideration,

The motion was adopted

THE CHAIRMAN,— I will now take the consideration of the Bill, clause by clause.

As there are no amendments, I will put clauses 2 to 20 to the vote of the House.

The question is:

"That Clauses 2 to 20 both inclusive do stand part of the Bill.

The motion was adopted

Clause 2, to 20 both were added to the Bill.

CLAUSE. 1, etc.

THE CHAIRMAN,—The question is :

"That Clause 1, the Long Title thePreamble and the Enacting formula do stand part of the Bill"

The motion was adopted

Clause 1, the Long Title the Preamble and the Enacting formula were added to the Bill.

Motion to pass

SRI AZEEZ SAIT.— I move :

"That the Karnataka Radio and Electrical Company (Acquisition of Shares) Bill, 1978 be passed.

THE CHAIRMAN.— Motion moved, The question is,

"That the Karnataka Radio and Electrical Company (Acquistion of Shares) Bill, 1978 be passed.

The motion was adopted and the Bill was passed.

MYSORE PORCELAINS LIMITED (ACQUISITION OF SHARES) BILL, 1978.

Motion to Consider

† SRI AZEEZ SAIT (Minister for Industries and Commerce).— I beg to move,

"That the Mysore Porcelains Limited (Acquisition of Shares) Bill, 1978 be taken into consideration

The question was proposed

Madam, this Mysore Porcelains Limited, manufacturing insulators under the collaboration agreement with Messrs N.G.K. Insulators Ltd., was not functioning well and accumulated loss of Rs. 48.90 lakhs upto the end of 1975. The paid up capital of Company was about Rs. 100 lakhs. The loss occurred due to required professional management and big financial support. Therefore, the Government in its wisdom thought that this industry might be handed over to B.H.E.L. which has now come forward to take it up and as well as the shares on per at Rupees 100 per share, In the bill by mistake it has been printed as Rs. 10/- as the value of a share. It is not Rs.10/-, it has to be read as Rs.100/-. There is no loss of share value. Hence, I have brought this bill to replace the ordinance. Thank you.

† SRI K. PUTTASWAMY.— Would the Hon.Minister kindly say what were the reasons for exercising their discretion. They simply said that of their wisdom, the Government thought it better to hand over, We are now questioning their wisdom. We would like to know what were the advantages for handing over to B.H.E.L. What were that compelling reasons ? Here it is a factory which is not working under loss. It is not on the line of Radio Electricals. The shares were valued on par at the rate of Rs.100/-. Then, why should we hand it over?

SRI S. R. BOMMAI.— I want to know whether this factory was making profit in previous years. In which year this loss of Rs. 48 and odd lakhs was incurred? So far as my information goes, it was working on a profit previously.

SRI AZEEZ SAIT.—Madam, I require some time for furnishing this information. The Government of Karnataka has shares worth aboutRs. 40 lakhs i.e. 40%, the K.S.I.D.C. has shares worth Rs. 36-76 lakhs i. e. 37%and the Japanese collaborators NGK Insulators Ltd. 20 lakhs i.e. 20% The general public owns shares worth Rs. 32. 40 lakhs. The B.H.E.L. has stipuluted that the Government of Karnataka should transfer their shares and the shares held by K.S.I.D.C. As it has not been possible to acquire the other shares through private negotiations, an ordinance was promulgated to acquire them, For the other reasons required by the hon. Member Sri Puttaswamy I would require some time.

SRI K. PUTTASWAMY.— In the Statement of Objects and Reasons it has been stated that 'for some years past the management of the company has not been satisfactory'. The unsatisfactoriness is not about the working of the factory but about the management of the factory. It is in the hands of the Government. This is an observation which goes against the Government. Perhaps they must have meant the working of the factory. If the Management of the company has been unsatisfactory, please share with us what are the unsatisfactory features of the mangement so that we may offer our remarks.

SRI AZEEZ SAIT.— It is a very simple matter. By 'unsatisfactory management' what they probably mean is that it did not have the technical knowhow and the Japanese collaborators were there. The question of expansion arose and it was a question of investing a huge sum of money. Government was not in a position to invest it. The B.H.E.L. came forward and said that as they have already taken over REMCO we would take over this also as a package. As there was very little chance of expansion if it remained with us, there was no other alternative for us but to strike this deal. I agree that unsatisfactory management' is not a happy word,

SRI K. PUTTASWAMY.— Madam, I am very thankful to the Hon, Minister for giving this some more interesting information. He said that this is a package deal.

SRI AZEEZ SAIT,— The porcelain Factory and REMCO have always gone together.

SRI K. PUTTASWAMY.— I accept what the Hon. Minister has stated last. It is a package consisting of two factories. These are put in the hands of the Government of India. He might say that it is just a package. For my purpose it is a package deal. It is for the House to decide whether what the Hon, Minister Sri Azeez Sait has isaid is correct or wha tI have stated is correct. ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬರು ದೊಡ್ಡವರು ಒಂದು ಕಥೆ ಹೇಳಿದರು. ಒಬ್ಬ ರೈತನ ಹತ್ತಿರ ಇದ್ದ ಹಸುವಿಗೆ ಕಾಯಿಲೆ ಬಂತು, ಆಗ ಆತ ದೇವರಿಗೆ ಹರಿಕೆ ಹೊತ್ತಿಕೊಂಡನಂತೆ, ಹಸುವಿಗೆ ಖಾಯಿಲೆ ವಾಸಿಯಾದರೆ ಹಸು ಮತ್ತು ಒಂದು ಹುಂಜ ಎರಡನ್ನೂ ಮಾರಿಬಿಟ್ಟು ಹಸುವಿನ ಬೆಲೆಯನ್ನು ದೇವರಿಗೆ ಕಾಣಿಕೆ ಕೊಡುತ್ತೇನೆ ಅಂತ. ದೈವವಶಾತ್ ಹಸುವಿಗೆ ಖಾಯಿಲೆ ಗುಣವಾಯಿತು. ಆತ ಹರಿಕೆ ಸಲ್ಲಿಸಬೇಕಾಯಿತ್ತು, ಹಸು ಬೆಲೆ ೩೦೦ ರೂಪಾಯಿ, ಹುಂಜದ ಬೆಲೆ ೧೫ ರೂಪಾಯಿ ಇತ್ತು. ಈತ ಹೇಗೆ ಮಾಡುವುದು ಅಂತ ಯೋಚನೆ ಮಾಡಿದ. ಸಂತೆಗೆ ತೆಗೆದುಕೊಂಡುಹೋಗಿ ಹುಂಜಕ್ಕೆ ೨೫೦ ರೂಪಾಯಿ ಹಸುವಿಗೆ ೫೦ ರೂಪಾಯಿ ಅಂತ ಹೇಳಿದ. ಅಂದರೆ ಒಟ್ಟು ೩೦೦ ರೂಪಾಯಿ ಆಯಿತು. ಕೊಂಡುಕೊಳ್ಳುವವರು ಲೆಕ್ಕ ಹಾಕಿಕೊಂಡು ೩೦೦ ರೂಪಾಯಿಗೆ ಎರಡನ್ನೂ ಕೊಂಡುಕೊಂಡರು. ಆಮೇಲೆ ದೇವರಿಗೆ ೫೦ ರೂಪಾಯಿ ಸಲ್ಲಿಸಿದ, ಇನ್ನು ೨೫೦ ರೂಪಾಯಿಯನ್ನು ಹುಂಜದ ಬೆಲೆಯನ್ನು ತಾನು ಇಟ್ಟುಕೊಡಂ. ಹೀಗೇನಾದರೂ ಆಗಿದೆಯೋ ಎಂಬುದು ಸಂಶಯವಾಗಿದೆ.

ಶ್ರೀ ಅಜೀಜ್ ಸೇಠ್.— *** *** *** ಯೋಚನೆ ಮಾಡಿ.

ಶ್ರೀ ಎಸ್. ಆರ್ ಬೊಮ್ಮಾಯಿ.— ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಸದಸ್ಯರು ಕಥೆ ಯಾತಕ್ಕೆ ಹೇಳ್ತಾರೆ ಅಂತ ಅರ್ಥ ಮಾಡಿಕೊಳ್ಳಬೇಕು. ಮಂತ್ರಿಗಳು ನಾಟಕೀಯವಾಗಿ ನಡೆದುಕೊಳ್ಳುತ್ತಿದ್ದಾರೆ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ. ಒಬ್ಬ ಹಿರಿಯ ಸದಸ್ಯರು ಕಥೆ ಮುಖಾಂತರ ಮಂತ್ರಿಗಳಿಗೆ ಪಾಠ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅದಕ್ಕೆ ಮಾನ್ಯ ಮಂತ್ರಿಗಳು *** ರೀತಿ ಮಾತನಾಡಿದರೆ ಒಳ್ಳೆಯದಲ್ಲ.

SRI AZEEZ SAIT.— I am sorry the hon. member cannot use that word.

SRI BOMMAI.— When a Senior Member......

SRI AZEEZ SAIT.— I am also equally a senior member. I know sri Puttaswamy much better than the hon. Member. Let him try to teach me. *** *** ** * ***

MR. CHAIRMAN.— The word ‘ used by the Hon Minister and the hon. Member and have to be expunged. Members should not get excited. We have to discuss matters calmly and come to conclusions,

4-30 P.M.

SRI K. PUTTASWAMY.— Women are wiser than men. I bow to the wisdom of the Chair. I am only sorry that the lesson that had to be drawn from the story recited was lost on my hon. friend. If only he

*** Word/words expungod as ordered by the Speaker.

had heard it he would have appreciated: My surprise is this is a factory; is a gold mine. This factory is very valuable and we could have built it up. We have had the benefit of foreign collaboration NGK and our products are sold like hot cakes. There is great demand. Perhaps the powers, whoever it may be whether the Government of India or some other person it means the same thing so far as we are concerned they were after it. They were after the Porcelain factory. In that deal they must also have purchased the Remco which was not doing well.

SRI AZEEZ SAIT.— I am only making clear that it was a package deal.

SRI K. PUTTASWAMY.— I am only surprised that my hon. friend referred to money, the daily allowance that are paid to the Members. I am sorry he is only at that level. The observation that we the Members make should not be linked with the D.A. that is being paid. If that should hold good then I do not know what to say of the expenditure that is incurred on Ministers. There are Ministers in this House who do not know what they are dealing with; there are Minister in this House who pilot Bills but they do not have information there are Ministers who try to participate in the subject but the do not know what the other person has said because they would be inattentive. For this if you take this aspect of money into consideration, whether the money spent on the House is waste for the expenditure on the Minister.

SRI AZEEZ SAIT.— I am sorry. I did not say that money spent on the House is a waste. I said casually, more as a joke and nothing else. The hon. member can tell me tow more stories and I will listen.

SRI K. PUTTASWAMY.—Madam Chairman, if necessity demands I shall promise the hon. friend that I shall norrate a few more parables. But I am only concerned with the attitude of the ministers, They seem to think that we come here for taking Rs 31. per day. We have received the same mandate as the Hon. Minister has received. We come here to serve the cause of the public in our own way.So, I dont like to waste the time of the House,

SRI AZEEZ SAIT,— Madam Chairman, by 5 o' clock I have to go because I have a very important meeting with foreign collaborators. The meeting was fixed at 4-30 P.M. thinking that thise Bill cold be completed. But I had to postpone the discussion to 5 P.M. I do not mind the hon. members discussing this Bill as elaborately as they want. My colleagues will be here to take down the points. By 4.55 P.M. I seek your permission to go and after the meeting I will come back and reply if the debate is over by then. If not I will nave to

reply only tomorrow. I am submitting this because I do not want anybody to pass a remark that I don't honour their remarks and I went away. The fact is that some delegates are coming from New York in connection with expansion of Bhadravati Paper Miils. I have to discuss with them They are going back tomorrow. Icannot keep them beyond this time. I request you to accommodate me.

SRI K. PUTTASWAMY.—We thank the hon. Minister for the concession shown to us. I want to make one observation. I do not think any communication is permitted between the House and the gallery. I found the Hon. Minister asking some and officers in the gallery saying 'yes'. I do not think such a thing is permitted.

SRI AZEEZ SAIT.—I just wanted to correct myself, whether they were from New York. I know the hon. member when he was sitting here was consulting officers. If I do the same thing it pinches him.

SRI K. PUTTASWMY.—Before the Hon. Minister goes on to more important work, I would like him to enlighten us on the following points:

(i) the management of the company has not been satisfactory—how it is not satisfactory;

(ii) the Government of India have agreed in the national interest to the take-over of all the assets and liabilities—what are those national interests.

Supposing we had not handed over the factory may I know whether national interest would have suffered? and how the package affair would have suffered if we had continued to have control over the factory? I would like the Hon. Minister to enlighten these points before he goes on important work.

SRI T.R. SHAMANNA.—I want to know whether the shares of the collaborators M/s. N.G.K. Insulators Ltd., have also been taken away? Were they not giving technical assistance? Since the collaborators are forced to take away their collaboration, is not the national interest affected?

SRI S.R. BOMMAI.—The assets of this Porcelain Factory were to the tune of Rs. 11 crores including land, machinery, buildings and share capital according to my information. It has been sold for Rs.5 crores to BHEL. This industry was making profits in earlier years. For 16 years it was a good industry helping about 10 small-scale industries by supply of raw materials. On account of the handing over of this industry to the Government of India, all these 10 small scale industries have been closed. What are the agreements made between the State Government and BHEL about conditions of the em-

ployees to be protected ? This is most important. What care the State Government has taken in this respect? It is not a fact that BHEL. refused to take REMCO without the Porcelain Factory ? That was the condition put by BHEL. Therefore the State Government was compelled to hand over this factory also—is it not a fact?

Sri Azeez Sait.—There was nothing wrong in the Management. But the Management was not a technical one and they were not in a position to have professional management which is required for an industry. Package deal had been done from the beginning that REMCO and the Porcelain Factory went together because they manufacture electrical goods like insulators, cables, meters, etc., and it is not correct to say that the BHEL said that unless porcelain Factory is also handed over they are not going to enter into the bargain. The Japanese collaboration, their technical knowhow was only for insulators and when BHEL took over they did not require technical know-how from the insulator manufacturers. There is nothing to doubt about it. About the price for which it was given, they have taken the depreciation value.

Sri S. R. Bommai.—It is not he question of handing over from one Government to another. But, if a factory worth Rs. 11 crores is handed over for Rs. 5 crores, the loss suffered by the State Government should be justified. Just because it is a deal with the Government of India, is it that we should lose Rs. 6 crores? Nothing is placed on record. Therefore I say that the Bill is brought in a hasty way.

Sri Azeez Sait.—It is depreciated value; it is nothing new. It is perfectly all right.

Sri S.R. Bommai.—In this deal there was pressure on the State Government. Has the Government constituted any expert Committee to know whether it is possible to improve this industry or not? Has the Government taken the opinion of the experts on this subject and then handed over. My impression is that you have yourself thought over and did it.

Sri Azeez Sait.—There was continuous loss since 1974; the first loss was Rs. 45 lakhs, then it was Rs. 69 lakhs, during next year it was Rs. 67.95 lakhs and then in another year it was Rs. 88.64 lakhs. So, the loss started r sing high. We never had any ray of hope of its being bettered. At the same time, there was the question of technical know-how and expert opinion. The department tried their best to improve the situation, but in vain. We had to put in more money. We had to change some machines and then we had to diversify the production. Hon· members need not have the least apprehen-

sion that BHEL had said that if we give Porcelain Factory along with REMCO they would take over or not. REMCO and Porcelain Factory go together; they are like husband and wife and both cannot be separated.

The total loss was about Rs. 312.96 lakhs upto 31-3-1977, and the net value of the assets was Rs. 19.812 lakhs. As I said earlier, as far as labour is concerned, their interest is safe and secure and there is no botheration. My hon. friend Sri Micheal Fernandez will take care of them. About their pay scales, they are given Government of India Public Undertakings scales of pay.

† ಶ್ರೀ ಎಸ್. ಆರ್. ಬೊಮ್ಮಾಯಿ.—ಸನ್ಮಾನ್ಯ ಸಭಾಧ್ಯಕ್ಷರೆ, ನಾವು ಈ ಬಿಲ್ಲಿನ ಬಗ್ಗೆ ಮಾನ್ಯ ಮಂತ್ರಿಗಳವರಿಂದ ಕ್ಲಾರಿಫಿಕೇಷನ್ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೆವು; ಅದನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಈ ಬಿಲ್ಲನ್ನು ಮಂಡಿಸುವಾಗ ಅವಶ್ಯಕತೆ ಇರತಕ್ಕ ವಿವರಗಳನ್ನು ಕೂಡ ಈ ಸಭೆಯ ಮುಂದೆ ಇಡತಕ್ಕದ್ದು ಮಂತ್ರಿಗಳ ಕರ್ತವ್ಯ. ಇಂತಹ ಒಂದು ಮಹತ್ವದ ಉದ್ದಿಮೆಯನ್ನು ರಾಜ್ಯಸರ್ಕಾರ ಕೇಂದ್ರಸರ್ಕಾರಕ್ಕೆ ವರ್ಗಾವಣೆ ಮಾಡುವಾಗ ಪೂರ್ಣ ವಿವರಗಳೊಂದಿಗೆ ಕಾರಣಗಳನ್ನು ಕೊಡಬೇಕಾಗುತ್ತದೆ. ಒಂದೊಂದೆ ಉದ್ದಿಮೆಗಳನ್ನು ತಾವು ಕೇಂದ್ರಕ್ಕೆ ವರ್ಗಾವಣೆ ಮಾಡುತ್ತಾ ಹೋದರೆ, ಕಡೆಗೆ ಈ ಸರ್ಕಾರವನ್ನೇ ಕೇಂದ್ರಕ್ಕೆ ವರ್ಗಾವಣೆ ಮಾಡಬೇಕಾಗುತ್ತದೆ ಎನ್ನತಕ್ಕ ಮಾತನ್ನು ನಮ್ಮ ಸದಸ್ಯರಾದ ಜೆ.ಹೆಚ್. ಪಟೇಲ್ ಅವರು ಬಹಳ ಚೆನ್ನಾಗಿ ಹೇಳಿದರು. ಅವರು ಹೇಳಿರತಕ್ಕಂತಹ ಮಾತಿಗೆ ಅರ್ಥ ಇದೆ. ನಮ್ಮ ರಾಜ್ಯಸರ್ಕಾರ ಉತ್ತಮ ರೀತಿಯಿಂದ ನಡೆಸಿಕೊಂಡು ಹೋಗಬಹುದಿತ್ತು. ಆದರೆ ಫ್ಯಾಕ್ಟರಿಯಲ್ಲಿ ಸರಿಯಾದ ರೀತಿಯಲ್ಲಿ ಮ್ಯಾನೇಜ್‌ಮೆಂಟ್ ನಡೆಸದೆ ಹಾನಿಯಾಗಿರತಕ್ಕಂಥಾದ್ದನ್ನು ಒಪ್ಪಿಕೊಂಡಿದ್ದಾರೆ. ಒಂದೇ ಒಂದು ವಾಕ್ಯ ಹೇಳಬೇಕು ಎಂದರೆ, ಪಬ್ಲಿಕ್ ಸೆಕ್ಟಾರ್‌ನಲ್ಲಿರತಕ್ಕ ಉದ್ದಿಮೆಗಳನ್ನು ನಮ್ಮ ಸರ್ಕಾರ ಯಾವರೀತಿ ನಡೆಸಿಕೊಂಡು ಬಂದಿದೆ ಎಂದು ನೋಡಿದರೆ ಸಾಕು ಸ್ಪಷ್ಟ ಚಿತ್ರ ಗೊತ್ತಾಗುತ್ತದೆ. ಇದರ ಬಗ್ಗೆ ನಾವು ಕಳೆದ ಆರು ವರ್ಷಗಳಿಂದ ನೋಡಿದ್ದೇವೆ. ಸರ್ವೇ ಸಾಮಾನ್ಯವಾಗಿ ಸರ್ಕಾರಿ ವಲಯದಲ್ಲಿರತಕ್ಕ ಎಲ್ಲಾ ಉದ್ದಿಮೆಗಳಲ್ಲಿ ಹಾನಿಯಾಗುತ್ತಿದೆ. ಇವೊತ್ತು ಬೆಸ್ಟ್ ಗವರ್ನಮೆಂಟ್ ಸೋಪ್ ಫ್ಯಾಕ್ಟರಿ ಏನು ಇದೆ, ಅಂತಹ ಫ್ಯಾಕ್ಟರಿಯು ಕೂಡ ಹಾನಿ ಪಡತಕ್ಕ ದುಸ್ಥಿತಿಗೆ ಬಂದಿದೆ. ಸರ್ಕಾರಿ ವಲಯಗಳಲ್ಲಿರತಕ್ಕ ಎಲ್ಲಾ ಉದ್ದಿಮೆಗಳಲ್ಲೂ ಹಾನಿಯಾಗುತ್ತದೆ. ಈಗ ಸೋಪ್ ಫ್ಯಾಕ್ಟರಿಯಲ್ಲಿ ಸುಮಾರು ೨ ಕೋಟಿ ರೂಪಾಯಿಯ ಸೋಪು ಸ್ಟಾಕ್ ಇದೆ ಎಂದು ಕೇಳಿದ್ದೇನೆ. ಇದೆಲ್ಲಾ ಸರ್ಕಾರದ ಮಿಸ್ ಮ್ಯಾನೆಜ್‌ಮೆಂಟ್‌ನಿಂದ ಆಗಿದೆ ಎಂದು ಹೇಳಬಹುದು. ಮೈಸೂರು ಸ್ಯಾಂಡಲ್ ಸೋಪು, ಜಗತ್ತಿನ ಯಾವುದೇ ಭಾಗದಲ್ಲೂ ಪ್ರೀತಿಯನ್ನು ಪಡೆದು ಮಾರಾಟವಾಗುತ್ತಿದ್ದಂತಹ ಸೋಪು, ಸುಮಾರು ೨ ಕೋಟಿ ರೂಪಾಯಿ ಬೆಲೆ ಬಾಳತಕ್ಕದ್ದು ಹಾಗೆ ಉಳಿದಿದೆ ಎಂದರೆ ನಾನು ಏನು ಹೇಳಬೇಕೋ ಅರ್ಥವಾಗುವುದಿಲ್ಲ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಸರ್ಕಾರಿ ವಲಯದಲ್ಲಿ ಇರತಕ್ಕ ಫ್ಯಾಕ್ಟರಿಗಳ ಮ್ಯಾನೇಜ್‌ಮೆಂಟ್ ಯಾವ ರೀತಿ ನಡೆಯುತ್ತವೆ, ಐರನ್ ಅಂಡ್ ಸ್ಟೀಲ್ ಫ್ಯಾಕ್ಟರಿ ಯಾವರೀತಿ ನಡೆಯುತ್ತಿದೆ, ಇವನ್ನೆಲ್ಲಾ ಆಲೋಚನೆ ಮಾಡಲಿಕ್ಕೋಸ್ಕರ ಇದನು ನಾನು ಹೇಳುತ್ತಿದ್ದೇನೆ. ಇದೇ ರೀತಿ ತಾವು ಉದ್ದಿಮೆಗಳನ್ನು ನಡೆಸಿಕೊಂಡು ಹೋದರೆ ಸರ್ಕಾರಿ ವಲಯದಲ್ಲಿರತಕ್ಕ ಎಲ್ಲ ಉದ್ದಿಮೆಗಳನ್ನು ಕೂಡ ಹಸ್ತಾಂತರ ಮಾಡಬೇಕಾಗುತ್ತದೆ. ಈ ಫ್ಯಾಕ್ಟರಿಯಲ್ಲಿ ನಾಲ್ಕು ಎಕರೆ ಭೂಮಿ ಇದೆ, ಅದರ ಬೆಲೆ ಸುಮಾರು ನಾಲ್ಕು ಕೋಟಿ ರೂಪಾಯಿ, ಸ್ಟಾಕ್ ಟ್ರೇಡ್ ಮೂರು ಕೋಟಿ ರೂಪಾಯಿ, ಸ್ಟೇಟ್ ಕ್ಯಾಪಿಟಲ್ ಒಂದು ಕೋಟಿ ರೂಪಾಯಿ, ಬಿಲ್ಡಿಂಗ್ ಅಂಡ್ ಮೆಷಿನರಿ ಮೂರು ಕೋಟಿ ರೂಪಾಯಿ ಇದೆ, ಒಟ್ಟು ಈ ಉದ್ದಿಮೆಯ ಬೆಲೆ ಸುಮಾರು ೧೧ ಕೋಟಿ ರೂಪಾಯಿ ಆಗುತ್ತದೆ. ಮಾನ್ಯ ಮಂತ್ರಿಗಳು ಅವಸರದಲ್ಲಿ ಹೋಗುವಾಗ ಬಿಲ್ಡಿಂಗ್, ಮೆಷಿನರಿ ಇವನ್ನೆಲ್ಲಾ ಲೆಕ್ಕಾಚಾರ ಮಾಡಬೇಕಾಗುತ್ತದೆ ಎಂದು ಹೇಳಿದರು. ಇವೊತ್ತು ಭೂಮಿ ಬೆಲೆ ಹೆಚ್ಚಾಗಿದೆ, ಮೆಷಿನರಿ ಬೆಲೆ ಹೆಚ್ಚಾಗಿದೆ, ಇದರ ಬಗ್ಗೆ ಡಿಪ್ರಿಸಿಯೇಷನ್ ಪ್ರಶ್ನೆಯೇ ಇಲ್ಲ. ಇದನ್ನು ಮಾರ್ಕೆಟ್ ವ್ಯಾಲ್ಯು ಲೆಕ್ಕದಲ್ಲಿ ತೆಗೆದುಕೊಳ್ಳಬೇಕಾಗಿದೆ. ಅಕೌಂಟೆನ್ಸಿ ಲೆಕ್ಕದಲ್ಲಿ ಡಿಪ್ರಿಸಿಯೇಷನ್ ಮಾಡುವುದಕ್ಕೆ ಹೊರಟರೆ ಹತ್ತು ವರ್ಷಗಳ ಹಿಂದೆ ಸುಮಾರು ಹತ್ತು ಸಾವಿರ

ರೂಪಾಯಿ ಖರ್ಚು ಮಾಡಿದರೆ, ಇವೊತ್ತು ಐದು ಸಾವಿರ ರೂಪಾಯಿ ಡಿಪ್ರಿಸಿಯೇಷನ್ ಆಗುತ್ತದೆ ಅದು ಏನಿದ್ದರೂ ಇನ್‌ಕಂ ಟ್ಯಾಕ್ಸ್ ಲೆಕ್ಕಕ್ಕೆ ಮಾತ್ರ. ಈ ವಿಷಯದಲ್ಲಿ ಹೇಳಬೇಕು ಎಂದರೆ ರಿಯಲ್ ವ್ಯಾಲ್ಯು ಬೇರೆ, ಮಾರ್ಕೆಟ್ ವ್ಯಾಲ್ಯು ಬೇರೆ. ಮಾರ್ಕೆಟ್ ವ್ಯಾಲ್ಯು ಪ್ರಕಾರ ಈ ಫ್ಯಾಕ್ಟರಿ ಬೆಲೆ ಹನ್ನೊಂದು ಕೋಟಿ ರೂಪಾಯಿ ಆಗುತ್ತದೆ, ಇದನ್ನು ಐದು ಕೋಟಿ ರೂಪಾಯಿಗೆ ಹಸ್ತಾಂತರ ಮಾಡಿದ್ದಾರೆ. ರೆವೊಕ್ಕೆ ತೆಗೆದುಕೊಳ್ಳುವಾಗ ಒಂದು ಕಂಡೀಷನ್ ಹಾಕಿ ಪೋರ್ಸಿಲಿನ್ ಫ್ಯಾಕ್ಟರಿ ಕೊಟ್ಟರೆ ರೆವೊಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಸ್ಪಷ್ಟವಾಗಿ ಕೇಂದ್ರ ಸರ್ಕಾರದವರು ಹೇಳಿದರು. ಅದಕ್ಕೆ ಮಣಿದು ಹನ್ನೊಂದು ಕೋಟಿ ರೂಪಾಯಿ ಬೆಲೆ ಬಾಳತಕ್ಕಂಥಾದ್ದನ್ನು ಐದು ಕೋಟಿ ರೂಪಾಯಿಗೆ ಕೊಟ್ಟಿದ್ದಾರೆ. ಇದರಿಂದ ಆರು ಕೋಟಿ ರೂಪಾಯಿ ನಷ್ಟವಾಗಿದೆ, ಇದಕ್ಕೆ ಹೊಣೆ ಯಾರು. ಇಷ್ಟೊಂದು ಅವಸರವಾಗಿ ಮಾಡಲಿಕ್ಕೆ ಕಾರಣ ಏನು. ಗೌರ್ನಮೆಂಟ್ ಆರ್ಡಿನೆನ್ಸ್ ಯಾವುದಕ್ಕೆ ತರಬೇಕು, ಇದಕ್ಕೆ ಬೆಲೆ ಎಲ್ಲಿದೆ, ಇವೊತ್ತು ಆರ್ಡಿನೆನ್ಸ್ ಮೂಲಕ ತಂದು ಈ ಸಭೆಯಲ್ಲಿ ಇಟ್ಟಮೇಲೆ ಪಾಸ್ ಮಾಡಬೇಕಾಗುತ್ತದೆ, ಬಡ ಬೋರೇಗೌಡನಿಂದ ಬಂದಂಥ ಹಣ ಹನ್ನೊಂದು ಕೋಟಿ ರೂಪಾಯಿ ಹಾಕಿ ಈ ಸಭೆ ಒಪ್ಪಿಗೆ ಇಲ್ಲದೇ ಹಸ್ತಾಂತರ ಮಾಡುತ್ತಾ ಇದ್ದಾರೆ. ಇದರ ಬಗ್ಗೆ ಒಂದು ಬಿಲ್ಲನ್ನು ಈ ಸಭೆಯಲ್ಲೇ ತಂದು ಚರ್ಚೆ ಮಾಡಬಹುದಿತ್ತು. ಆ ರೀತಿ ಮಾಡಿದ್ದರೆ ಈ ಸಭೆಯ ಸದಸ್ಯರು ಚರ್ಚೆ ಮಾಡಿ ಫ್ಯಾಕ್ಟರಿಯಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ಆಗಿದ್ದರೆ ಅದನ್ನು ತಿದ್ದುಕೊಂಡು ಇಲ್ಲಿಯೇ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದಿತ್ತು. ಅದರ ಬಗ್ಗೆ ಸದನದ ಸದಸ್ಯರಿಂದ ಒಳ್ಳೆಯ ಸಲಹೆಗಳನ್ನು ಪಡೆಯಬಹುದಿತ್ತು. ಇವೊತ್ತು ಆರ್ಡಿನೆನ್ಸ್ ಮೂಲಕ ಕಸಿದುಕೊಳ್ಳುವ ಪ್ರಯತ್ನ ಏನು ನಡೆದಿದೆ ಇದು ಆಗಬಾರದು ಎಂದು ಹೇಳುತ್ತೇನೆ. ಸುಮಾರು ಹದಿನಾರು ವರ್ಷಗಳವರೆಗೆ ನಡೆದುಕೊಂಡುಬಂದ ಈ ಒಂದು ಉದ್ದಿಮೆಯನ್ನು ಒಂದು ಆರ್ಡಿನೆನ್ಸ್ ಮೂಲಕ ಹಸ್ತಾಂತರ ಮಾಡುವ ಕಾರಣ ಏನು, ಅಂತಹ ಆತುರ ಏನು ಎಂದು ನಾನು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸೆಷನ್ ಕೂಡಿದಾಗ ಒಂದು ಬಿಲ್ಲು ತೆಗೆದುಕೊಂಡುಬಂದು ಈ ಸಭೆ ಒಪ್ಪಿಗೆಯನ್ನು ಪಡೆದುಕೊಂಡು ಕಾಯಿದೆ ಮಾಡಿದ ಮೇಲೆ ಹಸ್ತಾಂತರ ಮಾಡಬಹುದಿತ್ತು. ಆ ರೀತಿ ಮಾಡಿದರೆ ಈ ಸಭೆ ಒಪ್ಪಲಿಕ್ಕಿಲ್ಲ, ಈ ಸಭೆಯಲ್ಲಿ ವಿರೋಧ ಬರಬಹುದು ಒಂದು ಕೇಂದ್ರ ಸರ್ಕಾರದ ಒತ್ತಾಯಕ್ಕೆ ಮಣಿದು ಇದನ್ನು ಮಾಡಿದ್ದಾರೆ ಇದು ಸರಿಯಲ್ಲ. ಇನ್ನುಮುಂದಾದರೂ ಕೂಡ ಈ ರೀತಿ ಮಾಡಬಾರದು ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬೆಂಗಳೂರಿನಲ್ಲಿರತಕ್ಕ ಸುಮಾರು ೧೦–೨೦ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ನವರು ರಾ ಮೆಟೀರಿಯಲ್ಸ್ ತೆಗೆದುಕೊಂಡು ಬಂದು ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ಈಗ ಅವರಿಗೆ ಬಹಳ ತೊಂದರೆಯಾಗುತ್ತದೆ. ತಾವು ಈ ಕಂಪನಿಯನ್ನು ಹಸ್ತಾಂತರ ಮಾಡುವಾಗ ಮೊದಲಿನಂತೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನವರಿಗೆ ರಾ ಮೆಟೀರಿಯಲ್ಸ್ ಕೊಡಬೇಕು, ಅವರಿಂದ ತಯಾರಾದ ಸಾಮಾನುಗಳನ್ನು ತೆಗೆದುಕೊಳ್ಳಬೇಕೆಂದು ಏನಾದರೂ ಕಂಡೀಷನ್ಸ್ ಹಾಕಿದ್ದೀರಾ? ತಾವು ಈ ರೀತಿ ಕಂಡೀಷನ್ಸ್ ಹಾಕದೆ ಹೋದರೆ ನಮ್ಮ ಮೇಲೆ ನಂಬಿಕೆ ಇಟ್ಟುಕೊಂಡು ಲಕ್ಷಾಂತರ ರೂಪಾಯಿಗಳನ್ನು ಬಂಡವಾಳ ಹೂಡಿರುವ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನವರ ಗತಿ ಏನಾಗಬೇಕು ? ಅವರಿಗೆ ಎಷ್ಟು ಲಾಸ್ ಆಗುತ್ತದೆ ? ಇವರಿಗೆ ಉತ್ತೇಜನ ಕೊಡುವ ಬದಲು ಏತಕ್ಕೆ ಹೀಗೆ ತೊಂದರೆಯಾಗುವಂತೆ ಮಾಡಿದಿರಿ ? ಇದನ್ನೆಲ್ಲಾ ಆಲೋಚನೆ ಮಾಡದೆ ಈ ಕಂಪೆನಿಯನ್ನು ಹಸ್ತಾಂತರ ಮಾಡಿದ್ದು ಸರಿಯಲ್ಲ.

5–00 P.M.

ಸ್ವಾಮಿ, ಇನ್ನೊಂದು ಮುಖ್ಯವಾದ ವಿಚಾರ ಎಂದರೆ, ಫಾರಿನ್ ಕೊಲಾಬೋರೇಟರ್ಸ್ ಏನಿದ್ದಾರೆ ಅವರ ಒಂದು ಸಹಾಯದಿಂದ, ಸಹಕಾರದಿಂದ ಈ ಒಂದು ಉದ್ದಿಮೆ ಸ್ಥಾಪಿತವಾಯಿತು. ಈ ರೀತಿ ಸಹಾಯ, ಸಹಕಾರಗಳನ್ನು ನೀಡಿದವರನ್ನು ಒಂದು ಮಾತೂ ಕೇಳದೆ ಈ ಕಂಪೆನಿಯನ್ನು ಹಸ್ತಾಂತರ ಮಾಡಿದ್ದೀರಿ. ಇದರಿಂದಾಗಿ ಇನ್ನುಮುಂದೆ ಹೊರದೇಶದವರು ಯಾರೂ ಕೂಡ ನಮ್ಮ ದೇಶದಲ್ಲಿ ಉದ್ದಿಮೆಗಳನ್ನು ಸ್ಥಾಪನೆ ಮಾಡಲು ಮುಂದೆ ಬರುವುದಿಲ್ಲ. ಅವರು ನಮ್ಮ ಮೇಲೆ ನಂಬಿಕೆಯನ್ನೂ ಕೂಡ ಇಡುವುದಿಲ್ಲ. ಇಷ್ಟೇ ಅಲ್ಲದೆ ತುರ್ತು ಪರಿಸ್ಥಿತಿ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಅನೇಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ನಿಂತು ಹೋಗಿವೆ. ನಿರುದ್ಯೋಗಿ ಇಂಜಿನಿಯರ್‌ಗಳು ಇಂಡಸ್ಟ್ರೀಸನ್ನು ಸ್ಥಾಪನೆ ಮಾಡಿದರೆ ಅವರು ತಯಾರಿಸುವ ಸಾಮಾನುಗಳನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಅವರು ಫೈನಾನ್ಸ್ ಕಾರ್ಪೊರೇಷನ್‌ಗಳಲ್ಲಿ ಬಹಳ ಕಷ್ಟಪಟ್ಟು ಸಾಲ ಪಡೆದು ಉದ್ದಿಮೆಗಳನ್ನು

ಪ್ರಾರಂಭಿಸಿ ಸಾಮಾನುಗಳನ್ನು ತಯಾರಿಸುತ್ತಿದ್ದಾರೆ. ಆದರೆ ಅವರು ತಯಾರಿಸಿದ ಸಾಮಾನುಗಳನ್ನು ಕೆ.ಎಸ್.ಆರ್.ಟಿ.ಸಿ. ಯವರಾಗಲಿ, ಕೆ.ಇ.ಬಿ. ಯವರಾಗಲಿ, ಅಥವಾ ಬೇರೆಯವರಾಗಲಿ ತೆಗೆದು ಕೊಳ್ಳುತ್ತಿಲ್ಲ almost all those small scale industries have come to a stand still. ಈ ರಾಜ್ಯದ ಉದ್ದಿಮೆಗಳ ಸ್ಥಿತಿ ಇವತ್ತು ಬಹಳ ಹೀನಾಯವಾಗಿದೆ. ಪ್ರೈವೇಟ್ ಸೆಕ್ಟಾರ್‌ಗಳು, ಪಬ್ಲಿಕ್ ಸೆಕ್ಟಾರ್‌ಗಳು ಇಂಥಾ ಒಂದು ದುಸ್ಥಿತಿಗೆ ಬರಲು ಕಾರಣವಾದರೂ ಏನು ? ತಾವು ಇದನ್ನೆಲ್ಲಾ ಯೋಚನೆ ಮಾಡದೆ ಮಾಡಿದ್ದಾದರೂ ಏಕೆ ? ಈಗ ಕಾಲಾವಕಾಶ ಇಲ್ಲದೇ ಇರುವುದರಿಂದ ಮುಂದೆ ಇಂಡಸ್ಟ್ರಿಯಲ್ ಡಿಮ್ಯಾಂಡ್ಸ್ ಬಂದಾಗ ಅದರ ಮೇಲೆ ವಿವರವಾಗಿ ಮಾತನಾಡುತ್ತೇನೆ. ಸುಮಾರು ೧೦ ಜನ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಉದ್ದಿಮೆದಾರರು ತಮ್ಮ ಸಂಕಷ್ಟಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ಮನವಿಯನ್ನು ಮಾಡಿಕೊಂಡಿದ್ದಾರೆ. ಅವರು ಕೇಳುತ್ತಿರುವುದು, ಇವತ್ತು ನಾವು ಸ್ಥಾಪಿಸಿರುವ ಉದ್ದಿಮೆಗಳು ನಿಂತು ಹೋಗುವ ಪರಿಸ್ಥಿತಿಗೆ ಬಂದಿದೆ, ನಮಗೆ ರಾ ಮೆಟೀರಿಯಲ್ಸ್ ಕೊಡಿ, ನಾವು ತಯಾರಿಸುವ ಸಾಮಾನುಗಳನ್ನು ತೆಗೆದುಕೊಳ್ಳಿ ಎಂದು. ಇಷ್ಟಾದರೂ ಅವರನ್ನು ಕೇಳುವವರೇ ಇಲ್ಲ. ಅವರಿಗೆ ಒಂದು ಜವಾಬನ್ನೂ ಕೂಡ ಬರೆದಿಲ್ಲ. ಈ ರೀತಿ ಉದ್ದಿಮೆದಾರರಿಗೆ ತೊಂದರೆ ಕೊಟ್ಟರೆ ಮುಂದೆ ಯಾರು ತಾನೆ ನಾವು ಇಂಡಸ್ಟ್ರೀಸ್ ಸ್ಥಾಪನೆ ಮಾಡುತ್ತೇವೆಂದು ಬರುತ್ತಾರೆ.

ಸ್ವಾಮಿ, ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರಬಯಸುತ್ತೇನೆ. ಹಿಂದೆ ಮಾನ್ಯ ರಾಮಕೃಷ್ಣ ಹೆಗ್ಡೆಯವರು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಕೆಲವು ಕಂಪೆನಿಗಳನು ಪ್ರೈವೇಟ್‌ನವರಿಗೆ ಕೊಡಬೇಕೆಂಬ ಒಂದು ನಿರ್ಣಯವನ್ನು ಸಭೆಯ ಮುಂದಿಟ್ಟರು. ಅದರ ಬಗ್ಗೆ ಸಭೆಯಲ್ಲಿ ವಿರೋಧವನ್ನು ವ್ಯಕ್ತಪಡಿಸಿದಾಗ ಆ ವಿಷಯವನ್ನು ಅಷ್ಟಕ್ಕೆ ಕೈಬಿಟ್ಟರು.

SRI H. D. DEVE GOWDA.—In 1973 the former Minister for Industries, Sri S. M. Krishna made a statement on the floor of this House that under no circumstances REMCo is going to be transferred to any body-either to the Union Govt. or to any private entrepreneur Today, what happened ? I was absent when the Minister was making his statement. He has boasted himself that the Govt. would take steps to safeguard the interest of the State. So, let them talk less and do more work.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಇದನ್ನು ಮರೆತಿದ್ದೆ. ಮಾನ್ಯ ದೇವೇಗೌಡರು ರೆಂಕೋ ವಿಷಯ ನೆನಪು ಮಾಡಿಕೊಟ್ಟರು. ಹಿಂದೆ ಮಾನ್ಯ ರಾಮಕೃಷ್ಣ ಹೆಗ್ಡೆಯವರು ಈ ರೀತಿ ಪ್ರಯತ್ನ ಮಾಡಿ ಅದಕ್ಕೆ ಈ ಮನೆಯು ವಿರೋಧ ವ್ಯಕ್ತಪಡಿಸಿದಾಗ ಅಷ್ಟಕ್ಕೆ ಅದನ್ನು ಕೈಬಿಟ್ಟರು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಈ ರೀತಿ ಆರ್ಡಿನೆನ್ಸ್ ಮುಖಾಂತರ ವ್ಯವಹಾರ ಮಾಡದೇ ವಿಷಯವನ್ನು ಸಭೆಯ ಮುಂದಿಟ್ಟು ಸಭೆಯ ಅನುಮತಿಯನ್ನು ಪಡೆದು ಮಾಡಬೇಕು. ನಿಮ್ಮ ತಪ್ಪುಗಳನ್ನು ಜನತೆಯ ಮುಂದೆ ಸರಿಯಾಗಿ ಇಡುವುದಕ್ಕೆ ನಮಗೆ ಸಾಧ್ಯವಾಗಲಿಲ್ಲವಲ್ಲಾ ಎಂದು ನಾವು ವಿಷಾದ ಪಡಬೇಕಾಗಿದೆ. 56 per cent of the people have voted against you. ಈ ರಾಜ್ಯದಲ್ಲಿ ಉದ್ದಿಮೆಗಳು ಬೆಳೆಯಬೇಕಾದರೆ ನಾವೆಲ್ಲಾ ಸಹಕಾರ ನೀಡಬೇಕು. ಅವರು ತಯಾರಿಸಿದ ಸಾಮಾನುಗಳನ್ನು ನಾವು ತೆಗೆದುಕೊಳ್ಳಬೇಕು.

ಇನ್ನೊಂದು ವಿಚಾರ ಹೇಳಬೇಕೆಂದರೆ ಆ ಕಡೆ ಪಕ್ಷದ ಸದಸ್ಯರು ಯಾರಾದರೂ ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಗೆ ಭೇಟಿ ನೀಡಿದರೆ ಗೊತ್ತಾಗುತ್ತದೆ. ಅಲ್ಲಿ ಸುಮಾರು ೨ ಲಕ್ಷ ರೂಪಾಯಿ ಬೆಲೆ ಬಾಳುವ ಸಾಮಾನು ಹಾಗೆಯೇ ಬಿದ್ದಿದೆ. ಜನ ತಮಗೆ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. If small scale industries go to Hubli, Dharwar what will be their fate ? ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಮಿಸ್ ಮ್ಯಾನೇಜ್‌ಮೆಂಟ್ ನಡೆಯುತ್ತಿದೆ. ಇದು ನಡೆಯಬಾರದು, ಈಗಾಗಲೇ ಸುಮಾರು ೧೦–೧೫ ಜನ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನವರು ತಮ್ಮ ಕುಂದುಕೊರತೆಗಳ ಬಗ್ಗೆ ಏನು ಮನವಿ ಮಾಡಿಕೊಂಡಿದ್ದಾರೆ ಅವರಿಗೆ ಸರಿಯಾದ ಸಂರಕ್ಷಣೆ ಕೊಡಿ, ಇಂಥ ಉದ್ದಿಮೆಗಳನ್ನು

ಮಾರಾಟ ಮಾಡಬೇಡಿ. ಇನು ಮುಂದಾದರೂ ಇಂಥ ನಿರ್ಣಯವನ್ನು ತೆಗೆದುಕೊಳ್ಳುವಾಗ ವಿಷಯವನ್ನು ಸಭೆಯ ಮುಂದಿಟ್ಟು ಸಭೆಯ ಒಪ್ಪಿಗೆ ಪಡೆದು ಮಾಡಬೇಕೇ ಹೊರತು ಈ ರೀತಿ ಆರ್ಡಿನೆನ್ಸ್ ಮುಖಾಂತರ ಮಾಡುವುದನ್ನು ಕೈ ಬಿಡಬೇಕು. ಇದು ಈಗಾಗಲೇ ಮುಗಿದ ಕಥೆಯಾಗಿರುವುದರಿಂದ ಇನ್ನು ಮುಂದೆ ಇಂಥ ನಿರ್ಣಯಗಳನ್ನು ಮಾಡದೆ ಸರ್ಕಾರ ಎಚ್ಚರಿಕೆಯಿಂದ ನಡೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

SRI K. PUTTASWAMY.—Suppose the House agrees with you.

SRI S. R. BOMMAI.—Then it is well and good. We want to know the compelling circumstances. ಇದಕ್ಕೆ ಸಂಬಂಧಪಟ್ಟ ಆರ್ಡಿನೆನ್ಸ್ ಬಿಲ್ ಇನ್ನೂ ಪಾಸಾಗದಿದ್ದರೆ ಈ ಉದ್ದಿಮೆಯನ್ನು ರಾಜ್ಯಕ್ಕೆ ಉಳಿಸಿರಿ. ಇದರ ಬಗ್ಗೆ ಅಗ್ರಿಮೆಂಟ್ ಆಗಿಇದರ ಬಗ್ಗೆ ಹಿಂದಕೆ ಹೋಗುವುದಕ್ಕೆ ಬಾರದಿದ್ದರೆ ಹೆಚ್ಚು ಮಾತನಾಡುವುದಿಲ್ಲ. ಉಳಿದ ಉದ್ದಿಮೆಗಳನ್ನಾದರೂ ಸರಿಯಾಗಿ ನಡೆಸಿ ಎಂದು ನಾನು ಹೇಳ ಬಯಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ ಸರ್ಕಾರದ ಪಿಂಗಾಣಿ ಕಾರ್ಖಾನೆಯನ್ನು ಕೇಂದ್ರ ಸರ್ಕಾರದ ಒಂದು ಸಂಸ್ಥೆಗೆ ವಹಿಸಿಕೊಟ್ಟಿರುವ ಪ್ರಬಲವಾದ ಕಾರಣ ಏನು ಎಂದು ಈ ಸದನದ ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಸರ್ಕಾರದವರನ್ನು ಕೇಳಿದ್ದಾರೆ. ಅದಕ್ಕೆ ಸಮರ್ಪಕವಾದ ಉತ್ತರ ಬರಲಿಲ್ಲ ಎಂದು ಆಗ್ರಹವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದವರು ಒಂದು ಉದ್ದಿಮೆಯನ್ನು ನಡೆಸತಕ್ಕ ಸಂದರ್ಭದಲ್ಲಿ ಅದನ್ನು ಆರೋಗ್ಯಕರವಾಗಿ ನಡೆಸಬೇಕು, ಸಾರ್ವಜನಿಕರಿಗೆ ಅದರಿಂದ ಅನುಕೂಲವಾಗಬೇಕು. ಸರ್ಕಾರಕ್ಕೆ ಆದಾಯ ಬರಬೇಕು ಎನ್ನುವುದನ್ನು ದೃಷ್ಟಿಯಲ್ಲಿಟ್ಟು ಕೊಂಡು ಉದ್ದಿಮೆಯನ್ನು ನಡೆಸಿದರು. ಈ ಉದ್ದಿಮೆಯನ್ನು ನಡೆಸತಕ್ಕ ಕಾಲದಲ್ಲಿ ಸರ್ಕಾರದವರು ಎಡರು ತೊಡರುಗಳನ್ನು ಎದುರಿಸಿ ಈ ಎಡರು ತೊಡರುಗಳನ್ನು ಪರಿಹರಿಸಿಕೊಂಡು ಉದ್ದಿಮೆಯನ್ನು ಪ್ರಗತಿ ಪಥದಲ್ಲಿ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲದೆ ಇದ್ದಂತಹ ಪರಿಸ್ಥಿತಿ ಇತ್ತು. ಇದು ಪರಿಶೀಲನಾರ್ಹವಾದುದು. ಆದರೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ ಕೇಂದ್ರ ಸರ್ಕಾರದ ಸಂಸ್ಥೆಯೊಡನೆ ಒಪ್ಪಂದವನ್ನು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದ ಕಾರಣ ರೋಗಗ್ರಸ್ಥವಾದ ಕೆಲವು ಉದ್ದಿಮೆಗಳನ್ನು ಮುಚ್ಚಲೇ ಬೇಕಾದಂತಹ ಪರಿಸ್ಥಿತಿ ಇದ್ದಂತಹ ಕಾಲದಲ್ಲಿ ಅವುಗಳನ್ನು ಜೀವಂತವಾಗಿ ಉಳಿಸಬೇಕು, ಜೀವಂತವಾದ ಮೇಲೆ ಅದಕ್ಕೆ ಪುಷ್ಟಿಕರವಾದ ಆಹಾರವನ್ನು ಕೊಟ್ಟು ದಷ್ಟಪುಷ್ಟವಾಗಿ ಬೆಳೆಸಿಕೊಳ್ಳಬಹುದು. ಉದ್ದಿಮೆ ರಾಜ್ಯ ಸರ್ಕಾರದ ಆಶ್ರಯದಲ್ಲಾಗಲೀ, ಕೇಂದ್ರ ಸರ್ಕಾರದ ಆಶ್ರಯದಲ್ಲಾಗಲೀ ಇದ್ದು ಅದು ಅಭಿವೃದ್ಧಿಯಾದರೆ ಅದರಿಂದ ದೇಶಕ್ಕೆ ಕಲ್ಯಾಣವಾಗುತ್ತದೆ. ಅನಿವಾರ್ಯ ಪರಿಸ್ಥಿತಿ ಬಂದಾಗ ವರ್ಗಾವಣೆ ಮಾಡಿಕೊಳ್ಳಬಹುದು ಎನ್ನುವ ಊಹೆಯನ್ನು ಮಾಡುತ್ತಿದ್ದಾರೆ. ಸ್ಪಷ್ಟವಾದ ಕಾರಣಗಳನ್ನು ಈ ಸಮಯದಲ್ಲಿ ಸರ್ಕಾರದಿಂದ ಪಡೆಯುವುದಕ್ಕೆ ಸಾಧ್ಯವಾಗದೇ ಹೋದರೂ ಕೂಡ ಈ ರೀತಿಯ ಪರಿಸ್ಥಿತಿ ಉದ್ಭವಿಸಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದ ಅಂಥಾ ಪರಿಸ್ಥಿತಿ ಏನು ಎಂಬುದನ್ನು ತಿಳಿದುಕೊಳ್ಳಲು ಅದನ್ನು ಹೇಳದೇ ಹೋದರೆ ನಾವು ಏನು ಅರ್ಥ ಮಾಡಿಕೊಳ್ಳಬೇಕು ?

ಶ್ರೀ ಎಚ್. ಡಿ. ದೇವೇಗೌಡ.—ಈ ಸದನದಲ್ಲಿ ರೋಗಗ್ರಸ ಸರ್ಕಾರಿ ಉದ್ದಿಮೆಗಳು, ಖಾಸಗೀ ಉದ್ದಿಮೆಗಳು ಇವುಗಳನ್ನು ಸರ್ಕಾರ ವಹಿಸಿಕೊಂಡು ಅವುಗಳನ್ನು ಆರೋಗ್ಯಕರವಾಗಿ ಬೆಳೆಸಿ ಪುನಃ ಸಂಬಂಧಪಟ್ಟವರಿಗೆ ವಹಿಸಬೇಕು ಎಂದು ಈ ಸದನದಲ್ಲಿ ನಾವು ಶಾಸನ ಮಾಡಿದ್ದೇವೆ. ಇದು ಮಾನ್ಯ ಸದಸ್ಯರಿಗೆ ಜ್ಞಾಪಕ ಇರಬಹುದು. ಇದನ್ನು ಶ್ರೀಮಾನ್ ಕೃಷ್ಣಪ್ಪನವರ ಸರ್ಕಾರದವರೇ ಮಾಡಿದ್ದು. ರೋಗಗ್ರಸ್ಥವಾದ ಖಾಸಗೀ ಉದ್ದಿಮೆಗಳನ್ನು ಕೂಡ ಸರ್ಕಾರದವರು ವಹಿಸಿಕೊಂಡು ಅವುಗಳನ್ನು ಆರೋಗ್ಯಕರವಾಗಿ ಬೆಳೆಸಿದ ಮೇಲೆ ಅವುಗಳನ್ನು ಅವರಿಗೇ ಕೊಡಬಹುದು. ಅಥವಾ ಸರ್ಕಾರದವರೇ ನಡೆಸಬಹುದು ಇಂಥಾ ಒಂದು ಶಾಸನವನ್ನು ಕಳೆದ ವರ್ಷ ಈ ಸಭೆಯಲ್ಲಿ ಮಾಡಿದ್ದಾರೆ. ಆದ್ದರಿಂದ ಈಗ ಯಾವ ಕಾರಣಕೋಸ್ಕರ ಈ ಉದ್ದಿಮೆಗಳನ್ನು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ವಹಿಸಿ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ ಒಂದು ದೀರ್ಘವಾದ ಹೇಳಿಕೆಯನ್ನು ಈ ಮಸೂದೆಯನ್ನು ಈ ಸಭೆಯಲ್ಲಿ ಮಂಡಿಸಿದ ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಿದ್ದರೆ ಚರ್ಚೆಯನ್ನು ಹೆಚ್ಚು ಫಲಪ್ರದವಾಗಿ ನಡೆಸುವುದಕ್ಕೆ ಅವಕಾಶವಾಗುತ್ತಿತ್ತು. ಈಗ

ಮಾನ್ಯ ಕೃಷ್ಣಪ್ಪನವರು ಆ ರೀತಿ ಊಹಿಸಿಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. The Minister should come forward with the detailed circumstances which compelled the Government to hand over this industry to the Central Government.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರಾದ ದೇವೇಗೌಡರು ಹೇಳಿದಂತಹ ವಿಚಾರಗಳು ನನಗೆ ಗೊತ್ತಿದೆ. ಆದರೆ ಒಂದು ವಿಚಾರವನ್ನು ಅವರು ಗುಣಗ್ರಾಹಿಗಳಾದಂತಹವರು ತಿಳಿದು ಕೊಳ್ಳಬೇಕು ಸರ್ಕಾರದ ಒಂದು ಉದ್ದಿಮೆ ಅದು ರಾಜ್ಯ ಸರ್ಕಾರದ್ದು ಆಗಿರಲಿ, ಕೇಂದ್ರ ಸರ್ಕಾರದ್ದು ಆಗಿರಲಿ, ಅದನ್ನು ಒಂದು ಸರ್ಕಾರದಿಂದ ಮತ್ತೊಂದು ಸರ್ಕಾರಕ್ಕೆ ವರ್ಗಾವಣೆ ಮಾಡುವಾಗ ಖಾಸಗೀ ಉದ್ದಿಮೆಯನ್ನು ಸರ್ಕಾರಿ ಉದ್ದಿಮೆ ಎಂದು ಊಹಿಸಿಕೊಂಡು ಅದನ್ನೂ ಒಂದೇ ದೃಷ್ಟಿಕೋನದಿಂದ ನೋಡತಕ್ಕದಲ್ಲ. ಇದು ಸರಿಸಮನಾಗಿ ಹೋಲಿಕೆ ಬರತಕ್ಕ ವಿಚಾರ ವಲ್ಲ. ಶ್ರೀಮಾನ್ ದೇವೇಗೌಡರು ಮತ್ತು ಇತರ ಮಾನ್ಯ ಸದಸ್ಯರುಗಳನೇಕರು ಹೇಳಿದ ಹಾಗೆ ಈ ಒಂದು ಪಿಂಗಾಣಿ ಕಾರ್ಖಾನೆ ಏನಿದೆ ಇದು ನಮ್ಮ ರಾಜ್ಯದ ಹೆಮ್ಮೆಯ ಕಾರ್ಖಾನೆ. ಇದರ ಬಗ್ಗೆ ಯಾರದೂ ಪ್ರತಿವಾದ ಇಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರ ಒಂದು ಮುಂದಾಲೋಚನೆಯ ಫಲ ವಾಗಿ ಸ್ಥಾಪನೆಯಾದಂತಹ ಒಂದು ಉದ್ದಿಮೆ ಇದು. ಸರ್. ಎಂ. ವಿಶ್ವೇಶ್ವರಯ್ಯನವರ ಮುಂದಾ ಲೋಚನೆಯನ್ನು ಪ್ರಶ್ನೆ ಮಾಡತಕ್ಕ ಪ್ರಸಂಗ ಔದ್ಯೋಗೀಕರಣ ವಿಚಾರದಲ್ಲಿ ಇದುವರೆಗೂ ಯಾವುದೂ ನಡೆದಿಲ್ಲ. ಈ ಉದ್ದಿಮೆ ಯಾವೊತ್ತೂ ಸಹ ರಾಜ್ಯದ ಮತ್ತು ರಾಷ್ಟ್ರದ ಒಂದು ದೊಡ್ಡ ಸ್ವತ್ತು ಎನ್ನುವ ವಿಚಾರ ಎಲ್ಲರಿಗೂ ಗೊತ್ತಿದೆ. ಪದೇ ಪದೇ ಮಾನ್ಯ ಸದಸ್ಯರು ನಮ್ಮ ಸರ್ಕಾರ ತಪ್ಪು ಮಾಡಿದೆ ಈ ಕಂಪೆನಿಯನ್ನು ಕೇಂದ್ರ ಸರ್ಕಾರಕ್ಕೆ ವರ್ಗಾವಣೆ ಮಾಡಿ ಎನ್ನತಕ್ಕಂಥಾ ಮಾತನ್ನು ಹೇಳುವಾಗ ಅದರ ಹಿನ್ನಲೆ ಏನು ಅದಕ್ಕೆ ಪ್ರಬಲವಾದ ಕಾರಣಗಳೇನು ಎನ್ನುವ ಬಗ್ಗೆ ಸರ್ಕಾರ ಬೆಳಕು ಚೆಲ್ಲ ಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಕೇಳಿದರೆ ಸರ್ಕಾರದವರು ಹೇಳುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಹೇಳುತ್ತಾರೆ ಸಹಾನುಭೂತಿಯಿಂದ ಪರಿಶೀಲನೆ ಮಾಡಿದರೆ. ಆದ್ದರಿಂದ ನನಗೆ ಗೊತ್ತಿರತಕ್ಕುದ್ದು ಇಷ್ಟು ವಿಚಾರ. ನಾನು ಹೇಳಿದ ಹಾಗೆ ರೆವ್ಕೋ ಫ್ಯಾಕ್ಟರಿಯನ್ನು ಉಳಿಸುವುದಕ್ಕೆ ಸಾಧ್ಯವಿರಲಿಲ್ಲ ಅಂಥಾ ಒಂದು ಪರಿಸ್ಥಿತಿಯಲ್ಲಿ ಅದು ಇತ್ತು. ರೆವ್ಕೋ ಮತ್ತು ಪೋರ್ಸಿಲೈನ್ ಫ್ಯಾಕ್ಟರಿ ಎರಡೂ ಕೂಡ ಬೇರೆ ಬೇರೆ ಆಡಳಿತದಲಿ ಸೇರಿದ್ದರೂ ಕೂಡ ಸರ್ಕಾರದ ವ್ಯವಹಾರಕ್ಕೆ ಸಂಬಂಧಪಟ್ಟಹಾಗೆ ಒಂದೊಂದು ಘಟಕವಾಗಿ ನೋಡುತ್ತಾ ಬಂದಿದ್ದಾರೆ. ರೆವ್ಕೋ ಫ್ಯಾಕ್ಟರಿಯನ್ನು ಮುಚ್ಚಲೇ ಬೇಕಾದಂತಹ ಸಂದರ್ಭದಲ್ಲಿ ಬಿ.ಎಚ್.ಇ.ಎಲ್‌ಗೆ ವರ್ಗಾವಣೆ ಮಾಡ ಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ನನ್ನ ಆಲೋಚನೆ ತಪ್ಪೋ ಏನೋ ಸರ್ಕಾರ ಅದರ ಮೇಲೆ ಬೆಳಕು ಚೆಲ್ಲಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಇದುವರೆಗೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಅದನ್ನು ನಾನೂ ಸಹ ಹಂಚಿಕೊಳ್ಳಬೇಕಾಗಿದೆ.

ಈ ಒಂದು ಉದ್ದಿಮೆಯನ್ನು ಕೇಂದ್ರ ಸರ್ಕಾರಕ್ಕೆ ವರ್ಗಾವಣೆ ಮಾಡುವುದಕ್ಕಿಂತ ಮೊದಲು ಕೆಲವು ಜಾಗಗಳಿಗೆ ಸುಮಾರು ೩೦—೪೦ ಜನ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಮಾಡಿದೆ. ನೇಮಕ ಮಾಡುವ ಕಾಲದಲ್ಲಿ ಆಗಿನ ನೇಮಕಕ್ಕೆ ಸಂಬಂಧಪಟ್ಟ ನಿಯಮಗಳು ಏನಿದ್ದುವು ಅವುಗಳೆಲ್ಲವನ್ನೂ ಕೂಲಂಕುಶವಾಗಿ ಪರಿಶೀಲನೆ ಮಾಡಿ ಅದಕ್ಕೆ ಅನುಸಾರವಾಗಿ ನೇಮಕಗಳನ್ನು ಮಾಡಿದ್ದರು. ಆದರೆ ಈ ಒಂದು ವರ್ಗಾವಣೆ ಕೇಂದ್ರ ಸರ್ಕಾರಕ್ಕೆ ಆದಮೇಲೆ ಈ ನೇಮಕಗಳು ಅಕ್ರಮ ಎಂದು ಅವುಗಳೆಲ್ಲವನ್ನೂ ರದ್ದುಮಾಡಿದ್ದಾರೆ. ಆ ಜಾಗಗಳಲ್ಲಿ ಬೇರೆ ರಾಜ್ಯಗಳಿಂದ ಬಂದಂಥ ಜನಗಳನ್ನು ನೇಮಕ ಮಾಡಿದ್ದಾರೆ. ಇದು ನಿಜವಾಗಿಯೂ ಸಹ ನೋವನ್ನು ಉಂಟುಮಾಡತಕ್ಕ ವಿಚಾರವಾಗಿದೆ. ಏಕೆಂದರೆ charity begins at home ಎಂದು ನಾವು ತಿಳಿದುಕೊಂಡು ಮೊದಲು ನಮ್ಮ ಜನರಿಗೆ ಅವಕಾಶಕೊಟ್ಟು ಅನಂತರ ಬೇರೆಯವರಿಗೆ ಔದಾರ್ಯ ತೋರೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ನೌಕರರಿಗೂ Employees rights protect ಮಾಡಿದ್ದೇವೆ, ಆ ರೀತಿ ಕಂಡೀಷನ್ ಹಾಕಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು, ಇನ್ನೂ ಆಗಿಲ

ಶ್ರೀ ಎಚ್.ಟಿ. ಕೃಷ್ಣಪ್ಪ.—ನೀವು ಹೇಳಿದರೂ ಒಂದೇ, ನಾವು ಹೇಳಿದರೂ ಒಂದೇ, ಮಂತ್ರಿಗಳು ಹೇಳಿದರೂ ,ಒಂದೇಮಂತ್ರಿಗಳಿಗೆ ಒಂದುವೇಳೆ ಯಾರಾದರೂ ಸರಿಯಾಗಿ ವಿಷಯ ತಿಳಿಸದೇ ಹೋದರೆ ಅದನ್ನು ತಿದ್ದುವುದು ನಾವೂ ನೀವೂ ಮಾಡತಕ್ಕ ಕೆಲಸ.

ಶ್ರೀ ಎಚ್.ಡಿ. ದೇವೇಗೌಡ.—ಪೋಸ್‌ಲನ್ ಫ್ಯಾಕ್ಟರಿಯಲ್ಲಿ ನಿಮ್ಮ ಹೆಸರಿನವರೇ ಆದ ಕೃಷ ಪ್ಪ ಎನ್ನುವವರು ಅಧಿಕಾರಿಯಾಗಿದ್ದರು. ಅವರ ಸ್ಥಿತಿ ಏನಾಗಿದೆಯೆಂದು ಕೇಳಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇಲ್ಲಿ ವ್ಯಕ್ತಿ ಪ್ರಶ್ನೆಗೆ ಅಷ್ಟೊಂದು ಪ್ರಾಮುಖ್ಯ ಇರುವುದಿಲ್ಲ.

SRI H. D. DEVE GOWDA.—I am not advocating on behalf of any particular Officer. I cited that particular instance only to draw the attention of the House as to how the Officers or the employees are working thereafter it has been handed over. I am only giving it as a concrete example to indicate the fate of those people. The Hon. Minister has stated while moving the bill that they are protecting the interests of the workers,

SRI K. PUTTASWAMY.—I would request the hon. Member to kindly enlighten me on one aspect. This is a public undertaking, and it was a public undertaking under our control. Now, it is passed on as a public undertaking to the Government of India. In the objects and reasons it has been stated that it was transferred in national interest, Do you think if the factory had continued under our control, it would not have served the national interest? What difference it would have made as long as it is a public undertaking-whether it is under our control or under the control of the Government of India. I am not able to understand it. If the hon. Member would be able to enlighten me, I, shall be very grateful.

SRI H. T. KRISHNAPPA.—Either way, interest of the nation would have been served. I don't understand why a particular expresssion has been employed there. It might have been inadverstently done. Anyhow, It is for the Hon. Minister to make a statement. Now the House is fully aware of the circumstances under which this particular industry had been transferred to the B.H.E.L. When this REMCO factory was likely to be closed down, with no other alternative, the Government was forced to take a decision in order to see that the industry also survives along with the Porcelains Factory. That is how I understood the problem.

ಆದರೂ ನಮ್ಮ ನೌಕರರುಗಳನ್ನು ವಜಾಮಾಡಿದ್ದು ನನಗಂತೂ ಬಹಳ ವ್ಯಥೆಯನ್ನು ಉಂಟು ಮಾಡಿತು. ನೌಕರರನ್ನು ವಜಾ ಮಾಡುವ ಕಾಲದಲ್ಲಿ ಅವರು ಯಾವ ನಿಯಮಗಳನ್ನು ಪಾಲನೆ ಮಾಡಿದರು. ವಜಾ ಮಾಡುವುದಕ್ಕೆ ಪ್ರಭಲವಾದ ಕಾರಣಗಳು ಏನು ಎನ್ನುವುದು ಇದುವರೆಗೆ ತಿಳಿದು ಬಂದಿಲ್ಲ. ಮಾನ್ಯ ಎಸ್. ಎಂ. ಕೃಷ್ಣ ಅವರು ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ನಾನು ಒಂದು ಪತ್ರ ಬರೆದಿದ್ದೆ. ಅನಂತರ ಸಂಬಂಧಪಟ್ಟ ನೌಕರರು ಕೂಡ ಒಂದು ಗುಂಪಾಗಿ ಹೋಗಿ ಅವರಿಗೆ ಆಗಿರತಕ್ಕ ಅನ್ಯಾಯದ ಬಗ್ಗೆ ಒಂದು ಮನವಿಯನ್ನು ಸಲ್ಲಿಸಿದ್ದರು. ಆದರ ಬಗ್ಗೆ ಸರ್ಕಾರವಾಗಲೀ, ಆಗಿನ ಮಂತ್ರಿಗಳಾಗಲೀ ಯಾವ ವಿಧವಾದ ತೀರ್ಮಾನಕ್ಕೂ ಬರಲಿಲ್ಲ. ಈಗಲಾದರೂ ನಾನು ಸರ್ಕಾರವನ್ನು ಕೇಳಿ ಕೊಳ್ಳುವುದು ಏನೆಂದರೆ, ೩೦-೪೦ ಜನ ನೌಕರರು ಕೆಲಸದಿಂದ ಬರ್ತರ್ಫ್ ಆಗಿದ್ದಾರೆ. ಅವರಲ್ಲಿ ಕೆಲವರ

ಸರ್ಕಾರದ ವಯೋಮಿತಿ ಏನಿದೆ ಅದನ್ನು ದಾಟರುತ್ತಾರೆ, ಬೇರೆ ಕಡೆ ಕೆಲಸ ಸಿಕ್ಕುವ ಅವಕಾಶವನ್ನು ಕಳೆದುಕೊಂಡಿದ್ದಾರೆ, ಬೀದಿ ಪಾಲಾಗಿದ್ದಾರೆ. ಈ ರೀತಿ ಬೀದಿ ಪಾಲಾಗಿರತಕ್ಕರಿಗೆ ರಕ್ಷಣೆ ಕೊಡುವುದಕ್ಕೆ ಏನಾದರೂ ಮಾಡಬೇಕಾಗುತ್ತದೆ. ಇದು ಸರ್ಕಾರದ ನೈತಿಕ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಮಾಡಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ರಾಜ್ಯಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ವರ್ಗಾವಣೆಯಾದ ಈ ಉದ್ದಿಮೆ ಚೆನ್ನಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. Beating about the bush ಎನ್ನುವ ರೀತಿಯಲ್ಲಾದರೆ ಪ್ರಯೋಜನವಿಲ್ಲ ಎಂದು ಮಾನ್ಯ ಸ್ನೇಹಿತರಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈ ದಿನ ಎರಡು ಮುಖ್ಯವಾದ ವಿಚಾರ ಗಳನ್ನು ತೀರ್ಮಾನ ತೆಗೆದುಕೊಳ್ಳುವುದಕ್ಕೋಸ್ಕರ ನಮ್ಮ ಮುಂದೆ ಇಟ್ಟಿದ್ದಾರೆ. ಒಂದನೆಯದು, ರೆಂಕೋ ಫ್ಯಾಕ್ಟರಿಯನ್ನು ಕೇಂದ್ರ ಸರ್ಕಾರದ ಒಂದು ಸಂಸ್ಥೆಗೆ ಕೊಡತಕ್ಕಂಥಾದ್ದು, ಎರಡನೆಯದು ಇದೇ ಸಂದರ್ಭದಲ್ಲಿ ಪೋರ್ಸ್‌ಲೇನ್ ಫಾಕ್ಟರಿಯನ್ನು ಕೂಡ ಕೊಡತಕ್ಕಂಥಾದ್ದು. ಒಂದು ಫ್ಯಾಕ್ಟರಿಯಲ್ಲಿ ವಿಪರೀತ ನಷ್ಟವಾಗುತ್ತಿತ್ತು, ಅದನ್ನು ಮುಚ್ಚಲೇಬೇಕಾದಂಥ ಪರಿಸ್ಥಿತಿಯಲ್ಲಿದ್ದುದರಿಂದ ಅವನ್ನು ಕೇಂದ್ರಸರ್ಕಾರದ ಭಾರತ್ ಹೆವಿ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸಂಸ್ಥೆಗೆ ಕೊಡಬೇಕಾಯಿತು, ಇದರ ಜೊತೆ ಯಲ್ಲಿ ಇನ್ನೊಂದು ಫ್ಯಾಕ್ಟರಿಯನ್ನೂ ಕೊಡಬೇಕಾಯಿತು. ಇದರ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಸಮಂಜಸವಾದ ಒಂದು ಕಥೆಯನ್ನು ಹೇಳಿದರು. ಈ ಕಥೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಈಗ ಏನಾಗಿದೆಯೆಂದರೆ, ಪೋರ್ಸ್‌ಲೇನ್ ಫ್ಯಾಕರಿಯಲ್ಲಿ ಒಂದು ಕಡೆ ನಷ್ಟ ಹೆಚ್ಚಾಗುತ್ತಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಮತ್ತೊಂದು ಕಡೆ ಟೆಕ್ನಿಕಲ್ ಅಸಿಸ್ಟೆನ್ಸ್ ಇರುತ್ತಿರಲಿಲ್ಲ, ಸೂಪರ್‌ವಿಷನ್ ಮಾಡ ಬೇಕು ಎಂದು ಹೇಳಿದರು. ಮಾನ್ಯ ಕೃಷ್ಣಪ್ಪನವರು ಈ ಕಾರ್ಖಾನೆ ರೋಗಗ್ರಸ್ತವಾಗಿತ್ತು, ಅದಕ್ಕೆ ನಮ್ಮ ಡಾಕ್ಟರ್ಸ್ ಕೈಯಲ್ಲಿ ಇಂಜಕ್ಷನ್ ಕೊಟ್ಟು ಸರಿಪಡಿಸುವುದಕ್ಕೆ ಆಗುತ್ತಾ ಇರಲಿಲ್ಲ, ಕ್ಲೋರೋಫಾರಂ ಕೊಟ್ಟು ಬದುಕಿಸುವುದಕ್ಕೆ ಆಗುತ್ತಾ ಇರಲಿಲ್ಲ, ಆದುದರಿಂದ ಬೇರೆಯವರಿಗೆ ಕೊಡಬೇಕಾಯಿತು ಎಂದು ಹೇಳಿದರು. ನಮ್ಮ ಮೈಸೂರು ರಾಜ್ಯದಲ್ಲಿ ಹಿಂದೆ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯನವರು, ಮಿರ್ಜಾ ಸಾಹೇಬರು, ಮಾಧವರಾಯರು ನಮ್ಮ ರಾಜ್ಯದಲ್ಲಿ ಸಾಕಾದಷ್ಟು ಖನಿಜ ಸಂಪತ್ತು ಇದೆ, ವನಸಂಪತ್ತು ಇದೆ, ವಿದ್ಯುಚ್ಛಕ್ತಿಯನ್ನು ತಯಾರು ಮಾಡತಕ್ಕ ಶಕ್ತಿ ಕೂಡ ನಮ್ಮಲ್ಲಿದೆ, ಟೆಕ್ನಿಕಲ್ ಇಂಜನಿಯರ್ಸ್ ಬೇಕಾದಷ್ಟು ಜನ ಇದ್ದಾರೆ ಅನ್ ಎಂಪ್ಲಾಯ್ಡ್ ಲೇಬರರ್ಸ್ ಇದ್ದಾರೆ—ಇದನ್ನೆಲ್ಲಾ ಉಪಯೋಗಿಸಿಕೊಂಡು ರಾಜ್ಯದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಬೇಕು, ಸಾಧ್ಯವಾದಮಟ್ಟಿಗೆ ನಮ್ಮ ರಾಜ್ಯ ಸ್ವತಂತ್ರವಾಗಿ ತನ್ನ ಕಾಲಮೇಲೆ ನಿಲ್ಲಬೇಕು ಎಂಬ ಸುದ್ದೇಶದಿಂದ ಅನೇಕ ಕಾರ್ಖಾನೆಗಳನ್ನು ಶುರುಮಾಡಿದರು. ಈ ಕಾರ್ಖಾನೆಯನ್ನು ಕೇಂದ್ರ ಸರ್ಕಾರಕ್ಕೆ ವರ್ಗಾವಣೆ ಮಾಡಿದ್ದು ಒಂದು ವಿಧದಲ್ಲಿ ಒಳ್ಳೆಯದೇ ಆಯಿತು ಎಂದು ಕೆಲವರು ಹೇಳುತ್ತಾರೆ. ನಾವು ಈ ಕಾರ್ಖಾನೆಯನ್ನು ಕೇಂದ್ರಸರ್ಕಾರದ ಅಧೀನಕ್ಕೆ ಕೊಟ್ಟ ತಕ್ಷಣ ಅದರಲ್ಲಿ ಕೇರಳದವರನ್ನು ಮ್ಯಾನೇಜಿಂಗ್ ಡೈರಕ್ಟರಾಗಿ ಹಾಕಿದರೆ ಅವರು ಕೇರಳದವರಿಗೇ ಕೆಲಸಗಳನ್ನು ಕೊಡುತ್ತಾರೆ. ಬಂಗಾಳದವರು ಬಂದರೆ ಬಂಗಾಳದವರಿಗೇ ಕೊಡುತ್ತಾರೆ ಪಂಜಾಬಿಯವರು ಬಂದರೆ ಪಂಜಾಬಿಗಳಿಗೆ ಕೊಡುತ್ತಾರೆ, ನಾವು ಯಾರು ಬೇಕಾದರೂ ಬರಲಿ ಎಂದು ಧಾರಾಳವಾಗಿ ಹೇಳುತ್ತೇವೆ. ಅನೇಕ ಸಂದರ್ಭಗಳಲ್ಲಿ ಯಾರು ಮ್ಯಾನೇಜಿಂಗ್ ಅಥವಾ ಛೇರ್ಮನ್ ಆಗಿ ಇರುತ್ತಾರೋ ಅವರು ಯಾವರೀತಿ ಹೇಳುತ್ತಾರೋ ಆರೀತಿ ನಡೆಯುವುದರಿಂದ ನಮಗೆ ಕಠಿಣವಾಗಿದೆ. ಏಕೆಂದರೆ ನಮ್ಮ ಮಕ್ಕಳು ಕೆಲಸವಿಲ್ಲದೆ ಒಡಾಡುತ್ತಾ ಇದ್ದಾರೆ ಯಾವುದೋ ಕಾರಣದಿಂದ ಕೈಗಾರಿಕೆಯ ಆಡಳಿತವನ್ನು ಬೇರೆಯವರ ಕೈಗೆ ಕೊಟ್ಟಾಗ ಅವರು ತಮಗೆ ಬೇಕಾದವರಿಗೆ ಕೆಲಸ ಕೊಡುತ್ತಾ ಇದ್ದಾರೆ ಎನ್ನುವ ದೂರು ಬರುತ್ತಾ ಇದೆ.

೫–೩೦ ಪಿ.ಎಂ.

ಅವರಿಗೆ ಸಂಕುಚಿತ ಮನೋಭಾವ ಬರುತ್ತದೆ. ತಮಗೆ ಬೇಕಾದವರಿಗೆ ಕೆಲಸ ಕೊಡುವುದು. ಈ ರೀತಿ ಮಾಡುತ್ತಾರೆ. ಆವಾಗ ನಾವು ಯೋಚನೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಹೀಗಾಗಿ ಆ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕಂಥವರಿಗೆ ತೊಂದರೆಯಾಗುವ ಸಂದರ್ಭ ಬರುತ್ತದೆ. ಆದ್ದರಿಂದ ಆ ಇಂಡಸ್ಟ್ರೀಯನ್ನು ನಾವೇ ನಡೆಸುವುದರಿಂದ ನಿರುದ್ಯೋಗ ನಿವಾರಣೆ ಮಾಡುವುದಕ್ಕೆ ಅನುಕೂಲವಾಗಿ ಅದರ ಉಪಯೋಗ ನಮ್ಮ ಮಕ್ಕಳಿಗೆ ಸಿಗುತ್ತಿತ್ತು, ಆದ್ದರಿಂದ ಆ ಉದ್ದಿಮೆಯನ್ನು ನಾವು ನಡೆಸಿ ಕೊಂಡು ಹೋಗಿದ್ದರೆ ಚೆನ್ನಾಗಿ ಇತ್ತು ಎಂದು ನನಗನ್ನಿಸುತ್ತದೆ. ಆರ್ಡಿನೆನ್ಸ್ ತಂದದ್ದಾಗಿದೆ, ಇದ

ಪೋಸ್ಟ್ ಮಾರ್ಟಂ ಅದಕ್ಕೆ ಸುಮ್ಮನೆ ಒಪ್ಪಿಕೊಳ್ಳಿ ಎಂದು ಹೇಳಿದರು. ಈ ರೀತಿಯ ಆಕ್ರಮ ಇನ್ನು ಮುಂದೆ ನಡೆಯದಿದ್ದ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ರೆಂಕೋ ಷೇರ್ ೧೦ ರೂಪಾಯಿಗಳಿಗೆ ೩ ರೂಪಾಯಿ ಶೇರಿನ ವ್ಯಾಲ್ಯು ಅನ್ನು ಕೊಡಬೇಕೆಂದು ತೀರ್ಮಾನ ಮಾಡಿದೆ ಒಪ್ಪಿಕೊಳ್ಳಿ ಎಂಬುದಾಗಿ ಹೇಳಿದರು. ನಿಮಗೆ ಬರತಕ್ಕಂಥ ಪ್ರತಿಫಲ ಬೇಕಾದಷ್ಟು ಇದೆ ಎಂದು ಹೇಳಿದರು. ಪೋರ್ಸಲೈನ್ ಫ್ಯಾಕ್ಟರಿನಲ್ಲಿ ೧೦೦ ರೂಪಾಯಿಗೆ ೧೦೦ ರೂಪಾಯಿಗಳನ್ನು ಷೇರುದಾರರಿಗೆ ಕೊಡುತ್ತೇವೆಂದು ಹೇಳಿದ್ದಾರೆ. ೧೦೦ ರೂಪಾಯಿಗೆ ೧೦೦ ರೂಪಾಯಿಗಳನ್ನು ಕೊಡುತ್ತಿರುವಾಗ ಆ ಸಂಸ್ಥೆ ನಷ್ಟ ಅನುಭವಿಸಿಲ್ಲ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ೩೪೫ ಲಕ್ಷ ರೂಪಾಯಿಗಳು ನಷ್ಟವಾಗಿದೆ. ನಷ್ಟ ತುಂಬುವುದಕ್ಕೆ ಸಾಧ್ಯ ಇಲ್ಲ. ಆದ್ದರಿಂದ ಕೊಡಬೇಕಾಯಿತು ಎಂದು ಹೇಳಿದರು. ೧೦೦ ರೂಪಾಯಿಗೆ ೧೦೦ ರೂಪಾಯಿಗಳನ್ನು ಕೊಡುತ್ತಿರುವಾಗ ಆ ಸಂಸ್ಥೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ಪ್ರಮೇಯ ಏನಿದೆ? ಇದು ನಮ್ಮ ಮೂಲಭೂತ ಪ್ರಶ್ನೆ, ಪೋರ್ಸಲೈನ್ ಫ್ಯಾಕ್ಟರಿಯವರು ಎಲೆಕ್ಟ್ರಿಸಿಟಿಗೆ ಬೇಕಾದಂತಹ ಉಪಕರಣಗಳನ್ನು ತಯಾರು ಮಾಡುತ್ತಿದ್ದಾರೆ. ಆದ್ದರಿಂದ ಅದನ್ನು ಎಲೆಕ್ಟ್ರಿಸಿಟಿ ಬೋರ್ಡಿಗೆ ಸೇರಿಸಿಕೊಂಡು ಆದರಿಂದ ಬರತಕ್ಕಂಥ ಉತ್ಪಾದನೆಯನ್ನು ನಮ್ಮ ರಾಜ್ಯಕ್ಕೆ ಉಪಯೋಗಿಸಿಕೊಳ್ಳತಕ್ಕಂಥ ಅವಕಾಶ ಇತ್ತು. ಅದನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರಕ್ಕೆ ಕೊಟ್ಟಿರತಕ್ಕಂಥಾದ್ದು ಬಹಳ ತಪ್ಪಾದ ವಿಚಾರ. ಇದನ್ನು ನಾವು ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾದ ಪ್ರಶ್ನೆ ಬರುತ್ತದೆ.

ಇನ್ನೊಂದು ವಿಚಾರ. ಅದೇನೆಂದರೆ ಜಪಾನಿನ ಸಂಸ್ಥೆಯವರ ಜೊತೆಯಲ್ಲಿ ಕೊಲಾಬರೇಷನ್ ಮಾಡಿಕೊಂಡು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಅವರು ತಾಂತ್ರಿಕ ಸಹಾಯ (ಟೆಕ್ನಿಕಲ್ ಅಸಿಸ್ಟೆನ್ಸ್) ಕೊಡಬೇಕು. ಆ ಸಂಸ್ಥೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುವುದಕ್ಕೆ ನಮ್ಮ ಜೊತೆಯಲ್ಲಿ ವ್ಯವಹಾರ ಮಾಡಬೇಕು. ಇಡೀ ಭಾರತದಲ್ಲಿ ಉತ್ತಮವಾದ ಪಿಂಗಾಣಿ ಸಾಮಾನುಗಳನ್ನು ತಯಾರು ಮಾಡುವುದರಲ್ಲಿ ಜಪಾನಿನವರು ಬಹಳ ಪರಿಣತರು. ಅಂತಹ ಉದ್ದಿಮೆಯನ್ನು ವರ್ಗಾವಣೆ ಮಾಡುವಾಗ ಯಾರೊಬ್ಬರ ಅಭಿಪ್ರಾಯವನ್ನು ಕೇಳದೆ ಮಾಡಿರುವುದು ಬಹಳ ತಪ್ಪು. ಇದು ಮುಖ್ಯವಾದ ವಿಚಾರ. ಫಾರಿನ್ ಕೋಲಾಬರೇಷನ್ ನಮಗ ಬೇಕು. ಪ್ರಪಂಚದ ಬ್ಯಾಂಕಿನ ಸಹಾಯ ತೆಗೆದುಕೊಂಡು ಆ ಉದ್ದಿಮೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯ ಇತ್ತು. ಇಲ್ಲಿ ಬೇಕಾದಷ್ಟು ಪಿಂಗಾಣಿ ಸಾಮಾನುಗಳನ್ನು ತಯಾರು ಮಾಡುವುದಕ್ಕೆ ಸಾಧ್ಯ ಇತ್ತು. ಹಾಗೂ ನಮ್ಮ ರಾಷ್ಟ್ರದ ಅಭಿಮಾನಿಗಳಾದ ನಾವು ದೀರ್ಘವಾಗಿ ಯೋಚನೆ ಮಾಡಬೇಕು. ರಾಷ್ಟ್ರದ ಅಭಿವೃದ್ಧಿ ವಿಚಾರದಲ್ಲಿ ಮಾತನಾಡುವಾಗ ಇಂತಹ ವಿಚಾರಗಳಲ್ಲೂ ಬಹಳ ದೀರ್ಘವಾಗಿ ಯೋಚನೆ ಮಾಡಿ ನಂತರ ತೀರ್ಮಾನ ತೆಗೆದುಕೊಳ್ಳಬೇಕು. ನಮ್ಮ ಇಡೀ ರಾಷ್ಟ್ರದಲ್ಲಿರತಕ್ಕಂಥ ದಿಟ್ಟ ಮನೋಭಾವವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇಂತಹ ಒಂದು ಪ್ರಶ್ನೆ ನಮ್ಮ ಮುಂದೆ ಬಂದಾಗ ಅರ್ಥವಾಗುತ್ತದೆ. ಒಂದೊಂದು ರಾಜ್ಯದಲ್ಲಿ ಇರತಕ್ಕಂಥ ಉತ್ಪನ್ನವನ್ನು ಬೇರೆಯವರಿಗೆ ಕೊಡುವಾಗ ಬಹಳ ದೀರ್ಘವಾಗಿ ಯೋಚನೆ ಮಾಡಬೇಕು. ನಮ್ಮ ಕರ್ನಾಟಕಕ್ಕೆ ಬೇಕಾದಂತಹ ರಾ ಮೆಟಿರೀಯಲ್ಸ್‌ನ್ನು ಸುಲಭವಾಗಿ ಒದಗಿಸಿಕೊಳ್ಳುವುದಕೆ ನಮಗೆ ಅನುಕೂಲ ಇದೆ. ಹಾಗಿರುವಾಗ ನಮ್ಮ ರಾಜ್ಯದಲ್ಲಿರತಕ್ಕಂಥ ಫ್ಯಾಕ್ಟರಿಯನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟು ಕೊಡಬೇಕಾದಂತಹ ಪರಿಸ್ಥಿತಿ ಏಕೆ ಬಂತು ? ಇಂತಹ ವಿಚಾರಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಅದರ ಮುಖ್ಯ ವಿಚಾರಗಳನ್ನು ಜನಗಳ ಮುಂದೆ ಅಥವಾ ಜನತಾ ಪ್ರತಿನಿಧಿಗಳಾದವರ ಎದುರಿನಲ್ಲಿ ಚರ್ಚೆ ಮಾಡಿ, ಅದರ ಆಗುಹೋಗುಗಳನ್ನು ಚರ್ಚೆ ಮಾಡಿ ಕೊನೆಗೆ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಬಹಳ ಉತ್ತಮವಾಗುತ್ತಿತ್ತು. ಅಧಿಕಾರದಲ್ಲಿದ್ದೇವೆಂದು ಯಾರನ್ನೂ ಕೇಳದೆ ಕ್ರಮ ತೆಗೆದುಕೊಳ್ಳುವುದಾದರೆ ಬಹಳ ಕಷ್ಟವಾಗುತ್ತದೆ, ಪ್ರಪಂಚದಲ್ಲಿ ಎಲ್ಲರಂತೆ ನಮ್ಮ ರಾಷ್ಟ್ರದವರು ಮುಂದುವರಿದುಕೊಂಡು ಬರಬೇಕಾದುದು ನಮ್ಮ ಕರ್ತವ್ಯ. ತಾಂತ್ರಿಕ ಸಹಾಯ ತೆಗೆದುಕೊಳ್ಳುವುದಕ್ಕೆ ಸಹಾಯ ಆಗದೆ ಇದ್ದುದರಿಂದ ಇದನ್ನು ಕೊಡಬೇಕಾಯಿತು ಎಂಬುದಾಗಿ ಶ್ರೀ ಅಜೀಜ್ ಸೇಠ್‌ರವರು ಹೇಳಿದರು. ಆ ಬಗ್ಗೆ ಅವರು ಹೇಳಿದ್ದು ಸರಿಯೋ ಎನ್ನುವುದರ ಒಗೆ ನಾವು ಯೋಚನೆ ಮಾಡಬೇಕು.

SRI AZEEZ SAIT.—They have their own techinical advisers and collaborators. Now, the BHEL has got a lot of programme and they are having their own technical advisers and has got good technical

know how. When we handed ove. the industry naturally we have to part with the collaborators also.

ಶ್ರೀ ಟಿ.ಆರ್. ಶಾಮಣ್ಣ.—ಇಂತಹ ಮುಖ್ಯವಾದ ವಿಚಾರಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳು ವಾಗ ಸಾಧಾರಣವಾಗಿ ಜನಗಳು ಅದರಲ್ಲೂ ಉದ್ದಿಮೆ ವ್ಯವಹಾರದಲ್ಲಿ ಪರಿಣತರು ಯಾರಿದ್ದಾರೆ ಅವರುಗಳ ಜೊತೆ ಸಮಾಲೋಚನೆ ನಡೆಸಿ ರಾಜ್ಯದ ಹಿತದ ಬಗೆ ವಿಚಾರ ಮಾಡಿ ನಂತರ ತೀರ್ಮಾನ ತೆಗೆದುಕೊಳ್ಳುವುದು ಉತ್ತಮ. ನಮ್ಮ ಕೇಂದ್ರ ಸರ್ಕಾರಕೆ ಕೊಡಿ. ಆದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಇಂಡಸ್ಟ್ರೀಸ್ ನಮ್ಮ ಕೈಯಲ್ಲೇ ಇದ್ದಿದ್ದರೆ ನಮಗೆ ಅದರ ಸಹಾಯವಾಗುತ್ತಿತ್ತು. ಅದರಲ್ಲಿ ಲಾಭ ಬರುತ್ತಿತ್ತು. ಅದರಿಂದ ಪ್ರತಿಫಲ ಹಾಗೂ ಉತ್ಪಾದನೆ ಬರುತಿತ್ತು. ಇದನ್ನು ಬೇರೆಯವರ ಕೈಗೆ ಕೊಟ್ಟ ಹಾಗಾಯಿತು. ಇದರ ಬಗ್ಗೆ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಮಾತನಾಡಿ ಅವರಿಂದ ಹಣ ಸಹಾಯ ತೆಗೆದುಕೊಂಡು ಈ ಉದ್ದಿಮೆಯನ್ನು ನಡೆಸತಕ್ಕಂಥ ಅಧಿಕಾರವನ್ನು ನಾವೇ ಇಟ್ಟುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಈ ರೀತಿ ಮಾಡಿರತಕ್ಕಂಥಾದ್ದು ತಪ್ಪು. ಇದೇ ರೀತಿ ಇನ್ನು ಮುಂದೆ ಮಾಡುವುದಕೆ ಹೋಗಬೇಡಿ. ಈ ರೀತಿ ಮಾಡಿದ್ದು ಸರಿಯಾದುದಲ್ಲ ಎಂಬುದಾಗಿ ಕೊನೆಯಲ್ಲಿ ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI K. PUTTASWAMY.—What is the rate that N. K. G. demand for it.

SRI AZEEZ SAIT.—The question of profit did not arise. I will give that information.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ) ಮಾನ್ಯ ಸಭಾಧ್ಯಕ್ಷರೇ. ಈಗ ಎರಡು ಕೈಗಾರಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಮರಣೋತ್ತರ ಚರ್ಚೆಗಳು ಈಗ ನಡೆಯುತ್ತಿವೆ. ಆ ಉದ್ದಿಮೆಗಳು ರೋಗಗ್ರಸ್ಥರಾಗಿದ್ದರಿಂದ ಕೇಂದ್ರ ಸರ್ಕಾರಕೆ ವಹಿಸಿಕೊಡಬೇಕಾಯಿತು ಎಂಬುದಾಗಿ ಹೇಳಿದ್ದಾರೆ. ಆದರೆ ಆ ರೀತಿ ರೋಗಗ್ರಸ್ಥರಾಗುವುದಕ್ಕೆ ಕಾರಣ ಏನು ಎಂಬುದು ಇದುವರೆಗೂ ನಮಗಾರಿಗೂ ಗೊತ್ತಾಗಲಿಲ್ಲ. ಈ ಕೈಗಾರಿಕೆ ನಮ್ಮ ಕೈ ಬಿಟ್ಟು ಹೋಗುವುದಕೋಸ್ಕರ ನಾವು ಚಿಂತನ ಮಾಡುತ್ತಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ಇಂತಹ ಸಣ್ಣ ಉದ್ದಿಮೆಗಳನ್ನು ನಡೆಸುವುದರಲ್ಲಿ ಅಸಮರ್ಥವಾದರು ಎನ್ನುವ ಅನುಮಾನ ಕೇಂದ್ರಕ್ಕೆ ಬರಬಹುದು. ಮುಂದೆ ನಾವು ಉದ್ದಿಮೆಗಳನ್ನು ನಡೆಸುವುದಕ್ಕಾಗಿ ಕೇಂದ್ರದ ಸಹಾಯ ಪಡೆಯಬೇಕಾಗುತ್ತದೆ. ಅದಕ್ಕೋಸ್ಕರ ಅನುಮಾನ ಪಡಬೇಕಾಗುತ್ತದೆ. ಹೊಸ ಉದ್ದಿಮೆಗಳನ್ನು ಸ್ಥಾಪನೆ ಮಾಡುವಂತಹ ಸಮಯದಲ್ಲಿ ಇದನ್ನೇ ಉದಾಹರಣೆಯಾಗಿ ತೆಗೆದುಕೊಂಡು ಕರ್ನಾಟಕ ಸರ್ಕಾರ ಇಂತಹ ಸಣ್ಣ ಉದ್ದಿಮೆಗಳನ್ನು ನಡೆಸುವುದರಲ್ಲಿ ಅಸಮರ್ಥರಾದವರಿಗೆ ಬೇರೆ ಉದ್ದಿಮೆಯನ್ನು ಕೊಟ್ಟರೆ ಅವರು ಅದನ್ನು ನಡೆಸಬಲ್ಲರೇ ಎನ್ನುವ ಅನುಮಾನ ಕೇಂದ್ರಕೆ ಬರಬಹುದು. ಇದರಿಂದ ಮುಂದೆ ಕರ್ನಾಟಕದಲ್ಲಿ ಉದ್ದಿಮೆಗಳ ಬೆಳೆಯುವುದಕ್ಕೆ ಸಾಧ್ಯವೇ ಎನ್ನುವುದರ ಕಡೆಗೆ ನಾವು ಆಲೋಚನೆ ಮಾಡಬೇಕು. ಮತ್ತೆ ನಮ್ಮ ಅನೇಕ ಜನ ಮಾನ್ಯ ಮಿತ್ರರು ಮಾತನಾಡಿದರು. ಮಂತ್ರಿಗಳು ಮಾತನಾಡಿದರು. ಈ ಉದ್ದಿಮೆ ರೋಗಗ್ರಸ್ಥವಾಗುವುದಕ್ಕೆ ಕಾರಣ ಏನು ಎಂಬುದು ನನಗಾದರೂ ಅರ್ಥವಾಗಲಿಲ್ಲ. ನನಗೆ ಜ್ಞಾಪಕಕ್ಕೆ ಬರುತ್ತದೆ. ನಾನು ಕೇವಲ ವಕೀಲನಾಗಿದ್ದಾಗ, ಯಾರೋ ಒಬ್ಬ ಕಕ್ಷಿಗಾರ ಬಂದು ಒಂದು ರಿಲೀಜ್ ಪತ್ರ ಬರೆದುಕೊಡು ಎಂದು ಕೇಳಿದರು. ಗಂಡನ ಹೆಸರಿನಲ್ಲಿರತಕ್ಕಂಥಾ ಮನೆಯನ್ನು ಪೋಷಕರ ಹೆಸರಿಗೆ ಮಾಡಿ ಬರೆದು ಕೊಡುತ್ತೀರಾ ಎಂದು ಕೇಳಿದರು. ಅದಕ್ಕೆ ನಾನು ಏನು ಕಾರಣವೆಂದು ಕೇಳಲಿಲ್ಲ. ನಾನು ವಕೀಲನಾಗಿ ಬರೆದೆ. ನಾನು ಬರೆಯುವಾಗ ಮನೆಯ ಕುಟುಂಬವನ್ನು ನಡೆಸಲು ಅಸಮರ್ಥನಾಗಿದ್ದೇನೆ, ನಾನು ದುರ್ವ್ಯವಹಾರದಲ್ಲಿ ತೊಡಗಿದ್ದೇನೆ, ಮಕ್ಕಳ ಪೋಷಣೆಯನ್ನು ಮಾಡಲು ಅಶಕ್ತನಾಗಿದ್ದೇನೆ ಆದ್ದರಿಂದ ಈ ಆಸ್ತಿಯನ್ನು ನನ್ನ ಮಕ್ಕಳಿಗೆ ವಹಿಸಿದ್ದೇನೆ ಎಂದು ಬರೆದೆ. ಅದರಂತೆ ಈ ಸಂಸ್ಥೆಗಳನ್ನು ನಮ್ಮ ರಾಜ್ಯ ಸರ್ಕಾರದವರು ನಡೆಸಲು ಅಸಮರ್ಥರಾಗಿರುವುದರಿಂದ ಈ ಎರಡು ಸಂಸ್ಥೆಗಳನ್ನು ನಡೆಸಲು ಧೈರ್ಯವಿಲ್ಲದ ಕಾರಣ ಕೇಂದ್ರಕ್ಕೆ ವಹಿಸುತ್ತಿದ್ದಾರೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಈವತ್ತು ಈ ಎರಡು ಉದ್ಯಮಗಳನ್ನು ಯಾವ ಯೋಚನೆಯೂ ಮಾಡದೆ ಆರ್ಡಿನೆನ್ಸ್ ಮುಖಾಂತರ ಕೊಟ್ಟುಬಿಟ್ಟಿದ್ದಾರೆ. ಇದರಲ್ಲಿ ಲಕ್ಷಾಂತರ ರೂಪಾಯಿಗಳು ನಷ್ಟವಾಗತಕ್ಕಂಥ ಸಂದರ್ಭ

ವಿದ್ದರೆ, ಶಾಸನ ಸಭೆ ಬರುವ ವರೆವಿಗೂ ಸ್ವಲ್ಪ ತಡೆಯಬೇಕಾಗಿತ್ತು. ಶಾಸಕರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿತು . ಆರೀತಿ ಮಾಡಲಿಲ್ಲ. ಕರ್ನಾಟಕದಲ್ಲಿ ತಜ್ಞರ ಕೊರತೆ ಇರಲಿಲ್ಲ. ಕರ್ನಾಟಕ ದಲ್ಲಿ ಉದ್ಯಮದಾರರ ಕೊರತೆ ಇರಲಿಲ್ಲ. ಇಂಥ ಸಂದರ್ಭದಲ್ಲಿ ವಿವೇಚನೆ ಮಾಡದೆ ತಜ್ಞರ ಸಮಿತಿಯ ಅಭಿಪ್ರಾಯವನ್ನು ಪಡೆಯದೆ ಅದರ ರೋಗವನ್ನು ನಿವಾರಣೆ ಮಾಡಲು ಆಲೋಚನೆ ಮಾಡಿ ಅವಕಾಶ ವನ್ನು ಕಲ್ಪಿಸಿಕೊಳ್ಳದೆ ಎರಡೂ ಉದ್ಯಮವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟದು ನಿಜವಾಗಿಯೂ ಒಂದು ಆಶ್ಚರ್ಯದ ಸಂಗತಿಯಾಗಿದೆ. ನಮ್ಮ ಮಾನ್ಯ ಮಿತ್ರರು ಮಾತನಾಡುವಾಗ ನಮ್ಮ ಕರ್ನಾಟಕ ರಾಜ್ಯವು ಇಡಿ ರಾಷ್ಟ್ರದಲ್ಲಿಯೇ ಕೈಗಾರಿಕೋದ್ಯಮದಲ್ಲಿ ಹಿಂದುಳಿದ ರಾಜ್ಯವಾಗಿದೆ ಎಂದು ಹೇಳುತ್ತಿರು ವಾಗ ಇರತಕ್ಕಂಥ ಉದ್ಯಮಗಳನ್ನು ವಹಿಸಿಕೊಟ್ಟು ಅಸಮರ್ಥತೆಯನ್ನು ವ್ಯಕ್ತಪಡಿಸುತ್ತಿರುವುದು ನಿಜ ವಾಗಿಯೂ ಶೋಚನೀಯವಾದ ಪ್ರಸಂಗವಾಗಿದೆ. ಆದ್ದರಿಂದ ಇಂಥ ಅಶಕ್ತ ಕೆಲಸಗಳಿಗೆ ಕೈಹಾಕದೆ ನಮ್ಮ ರಾಜ್ಯದ ಉದ್ಯಮಗಳ ಕಡೆಗೆ ಹೆಚ್ಚಿನ ಆಸಕ್ತಿಯನು ವಹಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI K. PUTTASWAMY.—Perhaps the Hon.ble Minister feels that it is already a fait accompli.

SRI AZEEZ SAIT.—How can he presume like that?

SRI K. PUTTASWAMY.—From the plain reading of this Bill it makes me feel that there must be lot of confusion in the mind of the Hon.ble Minister who is piloting this Bill. I would not transport argument from outside but I would only point out by reading the Bill itself. The second part of the Preamble reads thus.

> "Whereas the working of the Mysore Porcelains Limited has not been satisfactory but the goods produced by the said company are vital to the needs of the country and it is necessary to secure the continuity and development of production of the said goods."

What does this indicate? This indicates that the working of the factory is not satisfactory. We have made large investments in it. This factory was a departmental concern for ten years It has been built up with great effort and sacrifice. With a view to enlarge it further to meet our needs we converted it into a company and secured foreign collaboration of a firm well known for its technical knowhow in the field viz. Messrs NGK Insulators Ltd. Yet the working of this factory was not satisfactory. Whose fault is that? The Hon'ble Minister will have to enlighten us. It is stated in the second para of the Statement of Objects and Reasons that 'for some years past the management of the Company has not been satisfactory'. Is there no difference between the management of the factory and the working of the factory. I thought the management was not satisfactory but the working was good. Reading both the Preamble and the Statement of Objects and Reasons together, it appears that the working and the management were not satisfactory.

SRI AZEEZ SAIT.—Both are the same,

† SRI K. PUTTASWAMY.—I beg to differ. The working relates to production and management refers to the managerial aspect. This is my understanding. If my hon'ble Friend Sri Azeez Sait understands it different, I cannot help it. It is stated in the Preamble that the goods produced by the said company are vital to the needs of the countrry. That means the goods are in demand and this factory has every scope to grow. I am sure the Government of Karnataka is not so poor as not to be able to find funds for a factory of this nature. We could have gone for public subscription. A factory which has such tremendous potentialities would certainly have attracted lot of public funds, there would not have been dearth for it. Whether it is under the control of the Government of Karnataka or of the Government of India, it would mean the same thing. It would have been a feather in our cap if only we had made eflorts and built it up. You know we have vast potentialities as far as hydel power is concerned. There is yet so much of power untapped. I am happy to know that the Government of Karnataka as well as the Government of India are both making herculean efforts to tap this untapped energy and so the goods produced by this factory are needed most. When that is so I fail to understand why we should hand it over to the Government of India or BHEL. If it is continued under our control, even then it would have served the national interest. This factory no doubt serves national interest and we could have seen that the national interest is served very well. If any of our forefathers who conceived this idea and who built it up were to be alive today, they would feel very unhappy.

You know the Steel Authority of India. You know what sacrifice the State has made to build up VISL. Supposing tomorrow the Government hands over the VISL to the Steel Authority of India by issuing an ordinance with the same Objects and Reasons and the Hon'ble Minister were to tell us, what after all we have not handed over to any individual; we have handed over only to the Steel Authority of India; what if the property stands in the name of a son or in the name of father, it serves the same interest. Would you kindly envisage what would be the feelings of this House then? I for one will have the same feeling. It is a going concern. We cannot be led away by the face value, the value of shares quoted in the Stock Exchanges. When we are going to give the controlling interest, the shares have a higher value. I need not tell the Minister about it. What is the answer they gave when we asked why they gave a higher rate to acquire shares from private individuals in the Mysore Paper Mills? The answer that they gavewas that they wanted to acquire a controlling interest and so they did not mind giving something more

than what the shares were quoted. Perhaps there must be some reason. But what is it here? We are handing over a factory which is built on the land just by the side of the National highway. What was the value of the land when the Government put up that factory and what is the value of the land now? Have you been able to take into consideration what was the labour strength working. When they say that the factory is worth Rs. 11 crores, the factory has been sold for a lesser amount. It is sold for a song. Is it for this that we have sacrificed? My friend the Hon'ble Minister for Industries knows that our salary structure was very low when we built up the factory. What is it that we were giving to our labourers? A pittance compared with the rates of wages that were being given elsewhere. Is that not a sacrifice on their part? Why were you in such a hurry to hand over? You could have come before us. We know that they have strength. They are strong in this House and they can carry with the day whatever may be my argument. My argument may be convincing and the Hon'ble Minister may feel convinced. But, all the same when he has taken a precipitate action I expect him to stand on prestige when he stands on prestige he has sufficient strength to back him up and get this bill passed. But, I have a privilege and I have the right to have my say. He can have his own way and I am not coming in his way. But all the same, I have a duty to perform. I will presently show to what extent we have sacrificed and all that has not been taken into consideration.

The Government was advancing loans to this factory and interest was due every year. I will read one para from the Report of the P.U.C. which relates to payment of interest to substantiate my point of view.

"The following amounts are due and outstanding from the company on the Government loans as on March 31st, each year:

1967–68	Rs. 17,64,400	1969–70	Rs. 12,36,263
1968–69	Rs. 12,46,709	1970–71	Rs. 11,96,250
		1971–72	Rs. 13,15,847

In all Rs 67,93,469"

The interest amounts were not being paid. They are not small amount. Supposing they had borrowed money from a bank, every year they would have added interest to interest. On that account the P.U.C. have calculated and said that the Government has lost by way of interest a sum of Rs 14,98,378. The company has also declared divided without paying interest. The P.U.C. have drawn attention to this fact and made an observation that the Government Dire tor have failed in their duty in not seeing that the interest were paid. Why I am saying all this is there have been so much of sacrifice made to build

up this factory. The value that is shown in the books of account is not the real value because all these factors have not been taken into consideration. They simply in a very casual manner carried on negotiations and arrived at certain things and say that they will sell the factory and issue an ordinance.

About the Ordinance, when was the Ordinance issued ? If I remember correct, the Ordinance was issued in the month of December last. It is a matter of common knowledge that the life of the last Assembly was at the best 3 months, and elections were round the corner. When they know that the Elections were round the corner and this Ordinance which was promulgated would only be placed at the reconstituted Assembly, I question the wisdom of the Government in getting an Ordinance passed. What would have happened supposing the electorate had returned some other party to office ? This would have been a scrap of paper. So, Mr. Speaker, I want the Government to kindly tell us what exactly is the value of the Factory as on today ?

6-00 P. M.

SRI AZEEZ SAIT.—It is not correct to say that the Ordinance was not issued in the month of December. It was issued in the month of October last.

SRI K. PUTTASWAMY,—Sir, I stand corrected. I am thankful to the Hon'ble Minister by being so deligent. He has got immense potential for abilities, but he does not use it. That is the difficulty.

SRI AZEEZ SAIT.—Please wait and see. Sir. I have to go to the other House.

SRI K. PUTTASWAMY,—I would not like to cause any inconvenience to the chair. I have certainly to tell the House. They may help to safeguard the other industries which are now under the charge of my hon.friend.

SRI AZEEZ SAIT.—Please do not worry : they are very safe.

SRI K. PUTTASWAMY.—I must also feel safe. Sir, if you so desire, I will continue tomorrow, and I may take about 10 minutes tomorrow.

Business of the House

ANNOUNCEMENT

MR. SPEAKER.—The Business Advisory Committee, at a meeting held today has recommended the following programme of business for the House from tomorrow till the 31st March 1978 :

23rd March 1978 ... (i) The Karnataka Wakf Bill as passed by the Legislative Council.